ಬೆಲೆ ರೂ.2.50
D.O.P - 15th of every month at Udupi Head Office

# ಶ್ರೀ ಶಾರದಾ

ಮಾಸಪತ್ರಿಕೆ – 15 ಮೇ 2023

॥ ಧಿಯೋ ಯೋನಃ ಪ್ರಚೋದಯಾತ್ ॥

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ವರ್ಗಾಯಿಸಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

RNI No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102. ☎ 0820-2958444, 8971185844
ಸಂಪುಟ–24 ಸಂಚಿಕೆ–5 ಪುಟಗಳು–8 Registered Under No.UDP/1260/2021-2023 Licenced to Post without Prepayment Licence No. SK/WPP/UDP/81/2021-23

## ಶ್ರೀ ಶಾರದಾ ಮಂಟಪದ ನವೀಕೃತ ಹವಾನಿಯಂತ್ರಿತ ಸಭಾಂಗಣದ ಉದ್ಘಾಟನೆ

### "ಸಂಘಟನಾ ಶಕ್ತಿಯೇ ಸಾಮಾಜಿಕ ಅಭಿವೃದ್ಧಿಗೆ ಪ್ರೇರಣೆ"- ಶ್ರೀ ಶ್ರೀ ವಿಶ್ವಪ್ರಸನ್ನತೀರ್ಥರು



"ಪರಿವರ್ತನೆ ಪ್ರಕೃತಿಯ ನಿಯಮ. ಕಾಲಕ್ಕೆ ಹೊಂದಿಸಿಕೊಂಡು ಸಾಮಾಜಿಕ ಜೀವನದಲ್ಲಿ ಮುನ್ನಡೆಯನ್ನು ಸಾಧಿಸುವುದು ಸಕಾಲಿಕವಾಗಿದೆ. ಇಂದಿನ ಬಿಸಿಲ ಬೇಗೆ, ಹೆಚ್ಚಿದ ತಾಪಮಾನಗಳಿಂದ ನಮ್ಮನ್ನು ನಾವು ರಕ್ಷಿಸಿಕೊಳ್ಳುವುದಕ್ಕಾಗಿ ಅಲ್ಲದೆ ಗ್ರಾಹಕರ ಬೇಡಿಕೆಗೆ ಸ್ಪಂದನೆ ನೀಡುವುದೂ ಬಹಳ ಪ್ರಾಮುಖ್ಯ ವಿಚಾರಗಳಾಗಿವೆ. ಶ್ರೀಕೃಷ್ಣನು ಗೀತೋಪದೇಶದಲ್ಲಿ ಅರ್ಜುನನಿಗೆ ಹೇಳಿದಂತೆ ನಮ್ಮನ್ನು ಉದ್ಧರಿಸುವುದಕ್ಕಾಗಿ ನಾವು ಇತರರಲ್ಲಿ ಕೈಚಾಚುವುದಲ್ಲ; ಆ ಉದ್ಧಾರಕ್ಕೆ ನಾವೇ ಕಾರಣರಾಗಬೇಕು. ಹಾಗೆಯೇ "ಸಂಘೇ ಶಕ್ತಿ: ಯುಗೇಯುಗೇ" ಎಂಬಂತೆ ಸಮಾಜದ ಸಂಘಟನೆಯಿಂದ ಮಾಡಿದ ನಿಮ್ಮ ಈ ಸಾಧನೆ ಎಲ್ಲರಿಗೂ ಅನುಕರಣೀಯ. ಗ್ರಾಹಕರ ಬೇಡಿಕೆಗೆ ಸ್ಪಂದಿಸಿ ಕಾಲಕ್ಕೆ ತಕ್ಕಂತೆ ಉಡುಪಿಯ ಆಸುಪಾಸಿನ ಸಮಾಜಕ್ಕೆ ಇಂತಹ ಅನುಕೂಲಕರ ಸೌಲಭ್ಯವನ್ನು ಒದಗಿಸಿ ಕೊಡುವ ಈ ಸ್ಥಾನಿಕ ಬ್ರಾಹ್ಮಣ ಸಂಘಟನೆಯು ಇನ್ನಷ್ಟು ಬೆಳೆಯಲಿ, ಅದಕ್ಕೆ ಆ ಭಗವಂತನ ಅನುಗ್ರಹವಿರಲಿ. ಇಂತಹ ಸಂಘಟನಾ ಶಕ್ತಿಯೇ ಸಾಮಾಜಿಕ ಅಭಿವೃದ್ಧಿಗೆ ಪ್ರೇರಣೆಯಾಗಲಿ" ಎಂದು ಉಡುಪಿ ಶ್ರೀ ಪೇಜಾವರ ಮಠಾಧೀಶ ಶ್ರೀಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಗಳು ತಮ್ಮ ಆಶೀರ್ವಚನ ನುಡಿಗಳಲ್ಲಿ ಹೇಳಿದರು.

ಅವರು ದಿನಾಂಕ 29–04–2023ರ ಸಂಜೆ ನಡೆದ ಶ್ರೀ ಶಾರದಾ ಮಂಟಪದ ನವೀಕೃತ ಹವಾನಿಯಂತ್ರಿತ ಸಭಾಂಗಣದ ಉದ್ಘಾಟನೆಯನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮೇಲಿನಂತೆ ನುಡಿದರು.

(4ನೇ ಪುಟಕ್ಕೆ...)

### ಶ್ರೀ ಶೃಂಗೇರಿ ಶಂಕರ ಮಠ, ಉಡುಪಿ ಶಾಖೆ ಇದರ ನಿವೇಶನಕ್ಕೆ ಧನಸಹಾಯ ನೀಡಿದವರು

| | |
|---|---|
| 44. ಎಂ. ಸುಭಾಷ್ಚಂದ್ರ, ಮುಂಬೈ | 25000/– |
| 45. ಪಂಜ ಉಮೇಶ ರಾವ್ ಮುಂಬೈ | 25000/– |
| 46. ಶ್ರೀಪಾದರಾಜ ಉಪಾಧ್ಯಾಯ ಮುಂಬೈ | 50000/– |
| 47. ಡಾ. ಲಕ್ಷ್ಮಿ ರಾವ್ ಮುಂಬೈ | 50000/– |
| 48 ಸದಾಶಿವ ಎಸ್ ರಾವ್ ಮುಂಬೈ | 1,00,000/– |
| 49. ಶ್ರೀ ಸುಬ್ರಹ್ಮಣ್ಯ ಸೇವಾ ಸಂಘ ಮುಂಬೈ | 1,00,000/– |
| 50. ಸುದರ್ಶನ ರಾವ್ ಪಿ. , ಬೆಂಗಳೂರು | 1,25,000/– |
| 51. ಟಿ. ಉಮೇಶ ರಾವ್ ಪುತ್ತೂರು | 25000/– |
| 52. ಎನ್ ಎಸ್ ನಟರಾಜ್ ಪುತ್ತೂರು | 1,00,000/– |
| 53. ಪವನ್ ಕುಮಾರ್ ಬೆಂಗಳೂರು | 50000/– |
| 54. ರಜತ್ ರಘುವೀರ ರಾವ್, ನಾಸಿಕ್ | 50000/– |
| 55. ಮಿಲಿಂದ್ ಕೃಷ್ಣಮೋಹನ ರಾವ್, ಪೂನಾ | 75000/– |
| 56. ರಂಜನಾ ಮಿಲಿಂದ್ ರಾವ್ ಪೂನಾ | 50000/– |
| 57. ಪಿ. ರಾಧಾಕೃಷ್ಣ ರಾವ್ ಮುಂಬೈ | 51000/– |

(ಮುಂದುವರಿಯುವುದು....)

**ಸಮಾಜ ಬಾಂಧವರ ಉದಾರ ಧನಸಹಾಯವನ್ನು ನಿರೀಕ್ಷಿಸುತ್ತೇವೆ.**

*'Dharmadhikari, Sri Sringeri Shankara Matha, Udupi Branch' ಈ ಹೆಸರಿನಲ್ಲಿ SB A/c no 0182500101876001, IFSC code - KARB 00 00 018 ಕರ್ನಾಟಕ ಬ್ಯಾಂಕ್, ಅಂಬಾಗಿಲು ಇಲ್ಲಿಗೆ ಸಲ್ಲುವಂತೆ ಚೆಕ್ / ಡಿಡಿ / ನೆಫ್ಟ್ ಇತ್ಯಾದಿಗಳನ್ನು ಕಳಿಸಬೇಕಾಗಿ ಪ್ರಾರ್ಥನೆ.

*80 ಜಿ ನಿಯಮದಂತೆ ತೆರಿಗೆ ವಿನಾಯಿತಿ ಬೇಕಿದ್ದವರು 'Sri Sringeri Sharada Peetham Charitable Trust, Sringeri' ಈ ಹೆಸರಲ್ಲಿ ಚೆಕ್/ಡಿಡಿ ಇತ್ಯಾದಿಗಳನ್ನು ನನಗೆ ಕಳಿಸಬೇಕಾಗಿ ವಿನಂತಿ. PAN ಸಂಖ್ಯೆ ಹಾಗೂ ವಿಳಾಸ ಬೇಕು.

**ವಾಗೀಶ ಎಸ್. ಶಾಸ್ತ್ರೀ,** ಧರ್ಮಾಧಿಕಾರಿ, ಉಡುಪಿ (9449591513)
ವನಸುಮ, ಶ್ರೀದುರ್ಗಾದೇವಸ್ಥಾನದ ಹತ್ತಿರ, ಪುತ್ತೂರು ಉಡುಪಿ 576105

## ಉಡುಪಿಯಲ್ಲಿ ಶ್ರೀ ಶಂಕರ ಜಯಂತಿ



ಜಗದ್ಗುರು ಶ್ರೀ ಶಂಕರಾಚಾರ್ಯ ಜಯಂತಿ ಪ್ರಯುಕ್ತ ಉಡುಪಿ ಜಿಲ್ಲಾ ಶ್ರೀ ಶಾಂಕರ ತತ್ವ ಪ್ರಸಾರ ಅಭಿಯಾನ ಮತ್ತು ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಕುಂಜಿಬೆಟ್ಟು ಉಡುಪಿ ಇವರ ಸಂಯುಕ್ತ ಆಶ್ರಯದಲ್ಲಿ ದಿನಾಂಕ 25.04.2023ರ ಬೆಳಿಗ್ಗೆ 10 ಗಂಟೆಗೆ ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ಮಂಟಪದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಉಡುಪಿ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಇದರ ಅಧ್ಯಕ್ಷ ಶ್ರೀ ಮಂಜುನಾಥ ಹೆಬ್ಬಾರ್ ಪ್ರಾಸ್ತಾವಿಕ ಮಾತನಾಡಿ ಎಲ್ಲರನ್ನು ಸ್ವಾಗತಿಸಿದರು. ನಮ್ಮ ಸಮಾಜದ ಪುರೋಹಿತರಾದ ಶ್ರೀ ಪ್ರತಾಪ್ ಭಟ್ ಪುತ್ತೂರು ಶ್ರೀ ಶಂಕರಾಚಾರ್ಯರ ಜೀವನ ಮತ್ತು ತತ್ವಗಳ ಬಗ್ಗೆ ಉಪನ್ಯಾಸ ನೀಡಿದರು. "ಭಾರತದ ಓರ್ವ ಉದಾತ್ತ ದಾರ್ಶನಿಕರಾಗಿದ್ದು, ತಮ್ಮ ಜೀವಿತದ ಅತ್ಯಲ್ಪ ಸಮಯದಲ್ಲಿ ಸಮಗ್ರ ಭಾರತವನ್ನು ನಾಲ್ಕು ಬಾರಿ ಸುತ್ತಿ ಅಂದಿನ ಭಾರತದ ಧಾರ್ಮಿಕ ಪರಿಸ್ಥಿತಿಯನ್ನು ಸಿಂಹಾವಲೋಕನ ಮಾಡಿ ಸನಾತನ ಧರ್ಮವನ್ನು ಪುನರುತ್ಥಾನ ಮಾಡಿದ ಯುಗಪುರುಷರು. ಬ್ರಹ್ಮಸೂತ್ರ, ಉಪನಿಷತ್ತು, ಭಗವದ್ಗೀತೆಗಳಿಗೆ ಭಾಷ್ಯವನ್ನು ಬರೆದು ಜನಸಾಮಾನ್ಯನೂ ಅದರ ಸತ್ವವನ್ನು ತಿಳಿಯುವಂತೆ ಮಾಡಿದರು. ಪಂಚಾಯತನ ಪೂಜಾ ಪದ್ಧತಿಯೇ ಮೊದಲಾದ ಧಾರ್ಮಿಕ ಬದಲಾವಣೆಗಳಿಂದ ಕ್ರಾಂತಿ ಪುರುಷರೆನಿಸಿದರು, ಈ ಮೂಲಕ ಜಗದ್ಗುರುಗಳೆಂದು ವಿಶ್ವ ಮಾನ್ಯರಾಗಿದ್ದಾರೆ." ಎಂದು ತಮ್ಮ ಮಾತಿನಲ್ಲಿ ವಿವರಿಸಿದರು. ಅಂದು ಶ್ರೀ ಶಂಕರಾಚಾರ್ಯರ ಜೀವನ ಮತ್ತು ತತ್ವಗಳ ಆಧಾರಿತ" ರಸಪ್ರಶ್ನೆ ಸ್ಪರ್ಧೆ ಆಯೋಜಿಸಲಾಗಿದ್ದು, ಅತಿಥಿಗಳು ವಿಜೇತರಿಗೆ ನಗದು ಬಹುಮಾನ ವಿತರಿಸಿದರು. ಈ ದಿನದ ಉಪನ್ಯಾಸಕ ಶ್ರೀ ಪ್ರತಾಪ್ ಭಟ್ ಪುತ್ತೂರು ಇವರಿಗೆ ಶಾಲು, ಫಲ ಕಾಣಿಕೆ ನೀಡಿ ಗೌರವಿಸಲಾಯಿತು. ಕಾರ್ಯದರ್ಶಿ ಶ್ರೀ ಪ್ರಭಾಕರ ಭಂಡಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಉಡುಪಿ ಜಿಲ್ಲಾ ಶ್ರೀ ಶಾಂಕರ ತತ್ವ ಪ್ರಸಾರ ಅಭಿಯಾನದ ಜಿಲ್ಲಾ ಸಂಚಾಲಕ ಶ್ರೀ ವಿಶ್ವನಾಥ ಶ್ಯಾನುಭಾಗ್ ಧನ್ಯವಾದವಿತ್ತರು. ನಿರ್ದೇಶಕ ಶ್ರೀ ಕೃಷ್ಣಕುಮಾರ ರಾವ್ ಮಟ್ಟು ಕಾರ್ಯಕ್ರಮ ಸಂಯೋಜನೆ ಮಾಡಿದ್ದರು.

### ಶ್ರೀ ಕ್ಷೇತ್ರ ಕಟೀಲಿನಲ್ಲಿ ಜಗದ್ಗುರುಗಳು

## "ಸ್ವಧರ್ಮಾನುಷ್ಠಾನವೇ ಧರ್ಮದ ತಾತ್ಪರ್ಯ" : ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಶ್ರೀಗಳು



ಶ್ರೀ ದುರ್ಗಾಮಾತೆಯನ್ನು ಮಹಾಕಾಳಿ, ಮಹಾಲಕ್ಷ್ಮೀ, ಮಹಾಸರಸ್ವತಿ ರೂಪದಲ್ಲಿ ಉಪಾಸನೆ ಮಾಡಲಾಗುತ್ತದೆ. ಹೀಗೆ ಉಪಾಸನೆ ಮಾಡುವವರಲ್ಲಿ ನಾಲ್ಕು ವರ್ಗಗಳಿವೆ. ಮೊದಲನೆಯದು– ತನಗೆ ಕಷ್ಟಗಳಿವೆ ಅದನ್ನು ಹೋಗಲಾಡಿಸು ಮಾತೆ ಎಂದು. ಎರಡನೇಯದು– ಯಾವ ಕಷ್ಟವೂ ಇಲ್ಲ; ಜ್ಞಾನ ಕೊಡು ಎಂದು. ಮೂರನೇಯದು–ಕಷ್ಟವೂ ಇಲ್ಲ, ಜ್ಞಾನವೂ

(...4ನೇ ಪುಟದಿಂದ)

# "ಸ್ವಯಂ ಗತಂ" ಚಿಂತನ ಮಂಥನ



ಕನ್ನಡ ಸಾಹಿತ್ಯ ಪರಿಷತ್ತಿನ ಕೇರಳ ಗಡಿನಾಡು ಘಟಕದ ಆಶ್ರಯದಲ್ಲಿ ಜರಗಿದ ಮುರಳೀಧರ ಕಾಸರಗೋಡು ಅವರ "ಸ್ವಯಂಗತಂ" ಪುಸ್ತಕದ ಚಿಂತನ ಮಂಥನ ಕಾರ್ಯಕ್ರಮವನ್ನು ಬಹುಭಾಷಾ ವಿದ್ವಾಂಸ, ನಿವೃತ್ತ ಪ್ರಾಧ್ಯಾಪಕ ಶ್ರೀ ಪಿ. ಶ್ರೀಕೃಷ್ಣ ಭಟ್ ಉದ್ಘಾಟಿಸಿ ಮಾತನಾಡುತ್ತಾ "ತಡವಾಗಿ ಒಂದು ಕೃತಿಯ ಮೂಲಕ ಬೆಳಕಿಗೆ ಬಂದ ಮುರಳೀಧರರು ಕಾಂತಾರ ಸಿನಿಮಾದಂತೆ ಅಚ್ಚರಿಯನ್ನೇ ಮೂಡಿಸುತ್ತಾರೆ. ಇದು ತನ್ನಷ್ಟಕ್ಕೆ ಪ್ರತ್ಯೇಕವಾಗಿ ನಿಲ್ಲುವಂತಹ ಒಂದು ಕೃತಿ. ಆತ್ಮೀಯ ಬರಹದಂತೆ ಉತ್ತೇಜನ ನೀಡುವ ಶೈಲಿ ಇದ್ದು ಚಿಂತನ ಮಂಥನಕ್ಕೆ ಅವಕಾಶ ಮಾಡಿಕೊಡುತ್ತದೆ" ಎಂದು ಹೇಳಿದರು. ಕೃತಿಯ ಅವಲೋಕನ ಮಾಡಿದ ಸಾಹಿತಿ, ಕವಿ, ಪ್ರಾಧ್ಯಾಪಕರಾದ ಡಾ. ರಾಧಾಕೃಷ್ಣ ಬೆಳ್ಳೂರು "ಈ ಪುಸ್ತಕ ಆತ್ಮಗತವಾಗಿದ್ದರೂ ವೈಯಕ್ತಿಕವೆನಿಸದೆ ಸಾರ್ವತ್ರಿಕತೆಯನ್ನು ಸಾಧಿಸುತ್ತದೆ. ಸ್ವಚ್ಛ, ಸುಂದರ, ಸೃಜನಶೀಲ ಭಾಷೆ ಆಗಿರುವುದರಿಂದಲೇ ವಿಶಿಷ್ಟ ಸಂಸ್ಕೃತಿವಾಹಕವಾಗಿ ರೂಪು ತಳೆದಿದೆ" ಎಂದು ಹೇಳಿದರು.

ಅತಿಥಿಗಳಾಗಿ ಭಾಗವಹಿಸಿದ ಕವಯಿತ್ರಿ, ಲೇಖಕಿ ಡಾ. ಪ್ರಮೀಳ ಮಾಧವ, ಪೆರ್ಲ ಎಸ್.ಎನ್. ಹೈಸ್ಕೂಲಿನ ಪ್ರಧಾನ ಅಧ್ಯಾಪಕ ಶ್ರೀ ರಾಜೇಂದ್ರ ಬಜಕೂಡ್ಲು, ಪ್ರಖ್ಯಾತ ಜ್ಯೋತಿಷಿ ಶ್ರೀ ಸುಕುಮಾರ ಆಲಂಪಾಡಿ ತಮ್ಮ ಅನಿಸಿಕೆಗಳನ್ನು ಸೊಗಸಾಗಿ ವ್ಯಕ್ತಪಡಿಸಿದರು. ಕೃತಿಕರ್ತೃ ಮುರಳೀಧರ ತನ್ನ ಅನಿಸಿಕೆಗಳನ್ನು ಎಲ್ಲರೊಂದಿಗೆ ಹಂಚಿಕೊಂಡು ಪ್ರೋತ್ಸಾಹಿಸಿ ಸಹಕರಿಸಿದ ಪ್ರತಿಯೊಬ್ಬರನ್ನು ಅಭಿನಂದಿಸಿದರು. ಮುರಳೀಧರ ದಂಪತಿಗಳನ್ನು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಎಸ್.ವಿ. ಭಟ್ ನೆನಪಿನ ಕಾಣಿಕೆ ನೀಡಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಡಾ. ಶೋಭಿತಾ ಸತೀಶ್ ಅವರು ಕೆಲವು ಭಾವಗೀತೆಗಳನ್ನು ಹಾಡಿ ರಂಜಿಸಿದರು.

**ಸಂಪಾದಕ ಮಂಡಳಿ**

ಶ್ರೀ ಯು. ಅರವಿಂದ ಕುಮಾರ್
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಮಧುಸೂಧನ ರಾವ್ ಕುಂಜಾರುಗಿರಿ
ಡಾ। ಶ್ರೀಮತಿ ವಿಜಯ ರಾವ್ ವೈ.ಬಿ.
★★★★ ★★★★

ಸಲಹೆಗಾರರು :
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ
ಶ್ರೀ ಕೆ. ವೇಣುಗೋಪಾಲರಾವ್, ಅಂಬಲಪಾಡಿ

## ಅಭಿನಂದನೆಗಳು



ಶ್ರೀ ಶೈಲೇಶ್ ಕುಮಾರ್ ಬೆಳ್ಳೆ ಮತ್ತು ಶ್ರೀಮತಿ ಪುಷ್ಪಲತಾ ರಾವ್ ಅವರ ಪುತ್ರಿ ಡಾ.ಅಪೇಕ್ಷಾ ಬೆಂಗಳೂರಿನ ರಾಜಾಜಿನಗರದ ಇಎಸ್ಐ ಮೆಡಿಕಲ್ ಕಾಲೇಜಿನ ಅಂತಿಮ ವರ್ಷದಲ್ಲಿ ಟಾಪರ್ ಆಗಿದ್ದಾರೆ. ಈ ವಿಶೇಷ ಸಾಧನೆಗಾಗಿ ಅವರಿಗೆ ಮತ್ತು ಅವರ ಪೋಷಕರಿಗೆ ಅಭಿನಂದನೆಗಳು.



ಮಂಗಳೂರಿನ ಶ್ರೀಮತಿ ಮಲ್ಲಿಕಾ ಹಾಗೂ ಶ್ರೀ ರಾಜಶೇಖರ್ ಜೆ.ಹೆಚ್. ದಂಪತಿಯ ಪುತ್ರಿ ನಂದಿನಿಯವರು BAMS 3ನೇ ವರ್ಷದಲ್ಲಿ ಉತ್ತಮ ಅಂಕಗಳಿಸಿ ಉತ್ತೀರ್ಣರಾಗಿದ್ದಾರೆ. ಇವರು ಶಾರದಾ ಆಯುರ್ವೇದ ಕಾಲೇಜು ಮಂಗಳೂರು ಇದರ ವಿದ್ಯಾರ್ಥಿನಿಯಾಗಿದ್ದಾರೆ. ಇವರಿಗೆ ಶ್ರೀ ಶಾರದಾ ಅಭಿನಂದನೆಗಳು.

## ಪಡುಬಿದ್ರಿಯಲ್ಲಿ ಶ್ರೀ ಶಂಕರ ಜಯಂತಿ ಆಚರಣೆ



ತಾ.25.04.2023 ಮಂಗಳವಾರ ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಪಡುಬಿದ್ರಿ ಮತ್ತು ಆಡಳಿತ ಮಂಡಳಿ, ಶ್ರೀ ವಿಷ್ಣುಮೂರ್ತಿ ದೇವಸ್ಥಾನ, ಪಾದೆಬೆಟ್ಟು ಇವರ ಸಹಯೋಗದಲ್ಲಿ ದೇವರ ಬ್ರಹ್ಮಕಲಶೋತ್ಸವ ದಿನಾಚರಣೆ ಮತ್ತು "ಶ್ರೀ ಶಂಕರಭಗವತ್ಪಾದಾಚಾರ್ಯ ಜಯಂತಿ ಮಹೋತ್ಸವ"ವನ್ನು ಕ್ಷೇತ್ರದ ತಂತ್ರಿವರೇಣ್ಯರಾದ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಯವರ ಮಾರ್ಗದರ್ಶನದಂತೆ ನಡೆಯಿತು. ಶ್ರೀ ದೇವರಿಗೆ ಪವಮಾನ ಕಲಶಾಭಿಷೇಕ, ಶ್ರೀ ಶಂಕರಾಚಾರ್ಯರಿಗೆ ಕಲ್ಪೋಕ್ತ ಪೂಜೆ ಹಾಗೂ ಸಂಘದ ಸದಸ್ಯರಿಂದ ಅಷ್ಟೋತ್ತರ ಪಾರಾಯಣ, ಭಜನಾ ಕಾರ್ಯಕ್ರಮ ನಡೆಯಿತು. ಈ ಸಂದರ್ಭದಲ್ಲಿ ಬ್ರಹ್ಮಶ್ರೀ ಎಂ.ಸುಬ್ರಹ್ಮಣ್ಯ ಭಟ್ ಇವರನ್ನು ವಿದ್ವತ್ಸಮ್ಮಾನ ಮಾಡಿ ಗೌರವಿಸಲಾಯಿತು. ನಂತರ ಅನ್ನಸಂತರ್ಪಣೆಯು ನಡೆಯಿತು. ಈ ಕಾರ್ಯಕ್ರಮದಲ್ಲಿ ಸುಮಾರು 80ಕ್ಕೂ ಮಿಕ್ಕಿ ಭಗವದ್ಭಕ್ತರು ಪಾಲ್ಗೊಂಡರು.

## ಯಕ್ಷಪ್ರೇಮಿ ನಾರಾಯಣ ದತ್ತಿ ಪುರಸ್ಕಾರಕ್ಕೆ ದೇವದಾಸ್ ರಾವ್ ಆಯ್ಕೆ



ಕನ್ನಡ ಸಾಹಿತ್ಯ ಪರಿಷತ್‌ನ ಉಡುಪಿ ತಾಲೂಕು ಘಟಕದಿಂದ ನೀಡುವ 'ಯಕ್ಷಪ್ರೇಮಿ ನಾರಾಯಣ ಸ್ಮರಣಾರ್ಥ ದತ್ತಿ ಪುರಸ್ಕಾರ'ಕ್ಕೆ ಈ ಬಾರಿ ಹಿರಿಯ ಯಕ್ಷಗಾನ ಕಲಾವಿದ ದೇವದಾಸ್ ರಾವ್ ಕೂಡ್ಲಿ ಅವರು ಆಯ್ಕೆಯಾಗಿದ್ದಾರೆ.

ದೇವದಾಸ್ ಅವರು ಯಕ್ಷಗಾನ ಕೇಂದ್ರ ಉಡುಪಿಯ ಗುರುಗಳಾಗಿ ಸೇವೆ ಸಲ್ಲಿಸಿದ್ದರಲ್ಲದೆ, ದೇಶ ವಿದೇಶಗಳಲ್ಲಿ ಹಲವು ಯಕ್ಷಗಾನ ಕಾರ್ಯಕ್ರಮಗಳಲ್ಲಿ ಮದ್ದಲೆ ವಾದಕರಾಗಿ, ಕಲಾವಿದರಾಗಿ ಭಾಗವಹಿಸಿದ್ದರು. ಮೇ 5 ರಂದು ನಡೆಯಲಿರುವ ಕನ್ನಡ ಸಾಹಿತ್ಯ ಪರಿಷತ್‌ನ ಸಂಸ್ಥಾಪನ ದಿನಾಚರಣೆಯಂದು ಪ್ರಶಸ್ತಿ ಪ್ರಧಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.



Dr. Sanath S. Rao
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST
Clinic : 0820-6529474
Mobile : 9886093199
drsanathrao@gmail.com
JALAJA SKIN CLINIC
1ST FLOOR, SAI HARSHA SQUARE, KOLADAPETE (THENKAPETE),
OLD POST OFFICE ROAD, UDUPI - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.

ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408
ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ "ಗೃಹ ಸಾಲ" ಸಂಘದ ಪ್ರಾಥಮಿಕ ಸದಸ್ಯರಿಗೆ 10.00% (ಷರತ್ತುಗಳು ಅನ್ವಯ)

| | | |
|---|---|---|
| ಗೃಹ ಸಾಲ | : | 10% |
| ವಾಹನ ಸಾಲ | : | 12.5% |
| ಹಳೆಯ ವಾಹನ | : | 15% |
| ಆಭರಣ ಸಾಲ | : | 12% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 11.5% |

ಆಭರಣ ಸಾಲಕ್ಕೆ ಯಾವುದೇ ಸೇವಾ ಶುಲ್ಕ, ತೆರಿಗೆ ಇರುವುದಿಲ್ಲ.

ಠೇವಣಿಗಳ ಬಡ್ಡಿದರ

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 8.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ
ಪ್ರಧಾನ ಕಛೇರಿ (☎ 2522408) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114) ಬ್ರಹ್ಮಾವರ ಶಾಖೆ (☎ 2003456)
ಕುಕ್ಕಿಕಟ್ಟೆ ಶಾಖೆಯನ್ನು ಪ್ರಧಾನ ಕಛೇರಿಯೊಂದಿಗೆ ವಿಲೀನಗೊಳಿಸಲಾಗಿರುತ್ತದೆ. ಗ್ರಾಹಕ ಸದಸ್ಯರು ಸಹಕರಿಸಬೇಕಾಗಿ ವಿನಂತಿ



ತಂತ್ರಾಡಿ ವಿಶ್ವನಾಥ ಶಾನುಭೋಗ್
☎ 94487 24161
97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

GST : 29AKMPN4985H1ZD
ಶ್ರೀ ಕೃಷ್ಣ ಎಲೆಕ್ಟ್ರಾನಿಕ್ಸ್ & ಎಲೆಕ್ಟ್ರಿಕಲ್ಸ್
Mob. 9448953022
SHREE KRISHNA
ELECCTRONICS & ELECTRICALS
Sri Balaji Complex, Shop No-G-7,
Near KSRTC Bus Stand,
Udupi - 576101.
City Towers, Service Bus Stand,
Near Rao and Rao Circle, State Bank,
Mangalore - 575001
Branch at Mahalaxmi Prabha Complex, Market Road, Opp Tajmahal Hotel, Karkala

# ಶ್ರೀ ಸಿ.ಎಸ್.ರಾಯರ ಆತ್ಮಕಥನ 'SARVOTHAM'

- Y. Mohan Rao

(ಹಿಂದಿನ ಸಂಚಿಕೆಯಿಂದ....)

2. Life with a Mission : I joined The Canara Banking Corporation Ltd., Mangalore on 3 November 1969, as a clerk as per the bank's order at their Janakibhavi Road Branch, near the town police station in Dharwad. I received a transfer order to the Kumta branch, which was to reopen. The Dharwad branch manager had always spoken highly about my public relations skills, and the management had selected me to this position in order to build a new image for the bank. The management thought of transferring me within 3 months from the Kumta branch to reopen the Sirsi branch. In 1972, I was posted to reopen this branch along with my new manager, Baikadi Rama Rao. On 11 October 1972, I got married to Sunanda, Nagaveni Mami's daughter. The wedding took place in Sri Sharada Mantapa, Udupi, which had opened about a month ago. That was when I started wearing a wrist watch. On 3 November 1976, I joined the Ahmedabad branch, leaving my wife at her amma's house in Udupi along with the kids. This was to be my first trip outside Karnataka (other than the brief South India tour). The Ahmedabad branch has helped me enhance my working capacity and learn a lot of new work. It was entirely different from my earlier branches. I went to Navsari in October 1980 and finalized the location for the bank near the railway station. In Navsari, we lived like Gujaratis, so all our neighbours liked us very much. We enjoyed Gujarati food and the children would urge us to settle down in Gujarat as the people and the food were very good. By achieving multi goal targets in this branch, I became a prestigious Chairman Club Member, which was awarded only to 3-4 percent of branch managers at the all India level.

After a few months in Navsari, all of sudden in the month of January 1983, I received a phone call from the regional manager, asking me to take charge of the Surat branch immediately. With the kids growing up, I wanted to move the family back to Karnataka to facilitate their university admissions, which were not too far away. In 1987, I was transferred from the Surat to Shantinagar, Bangalore. After the completion of my term at the Shantinagar branch, the management transferred me to Madikeri, I joined the Madikeri branch in Coorg in April 1990. Madikeri was the 5th oldest branch of our bank.

In April 1991 I joined the Mangalore, Bunder branch. Even though the general manager assured me that he would post me to Poonja Arcade branch, which was the best branch in Mangalore. In April 1993, I joined the Kamala Nagar branch in Delhi, which was in the middle of the Kamala Nagar Market. When I joined this branch in May 1995, it was the second largest branch of our bank, the largest being the one at Nariman Point, Mumbai. I was successful and got a promotion. I always believe that hard work has no substitute.

A few weeks after the promotion I was posted to the Hubli Region as the regional manager. Earlier, there were two different regions called Hubli and Belgaum under two different regional managers. I joined the Hubli Region as assistant general manager and took charge from the two regional managers of the Hubli and Belgaum. I joined the Goa region headquartered at Panjim, in April 1998. In April 2000, I joined the head office as the corporate head of the 'Inspection and Audit Division, and Organization & Methods Division'. In 2003, I was called for an interview for the post of a general manager, a Scale VII top executive position. From Scale I to Scale VI, I got a promotion in the first attempt, but this was the first time I had lost the chance. However, I was happy that all the staff members considered and respected me as a general manager. I retired from service on 30 April 2005 after completing 36 years of an unblemished service. Retiring without any bad remarks after serving in different parts of the country and in different positions, was itself a great achievement. I gracefully retired from the bank, which had given me name, fame, position, and everything in my life. This ends a very important chapter of my life when I had a mission and in the process learnt the mantras like * Aim high to achieve high, * Lead from the front Etc.

3. Life after Retirement : I retired with feeling of contentment and fulfilment in the month of April 2005. As all my family members, my wife, two sons and two daughters-in-law were actively involved in giving suggestions, and giving financial assistance, we named our house 'Namma Mane' – that which belongs to everyone in the family. I hope after their retirement or whenever they want to, they would come and stay here. I worked as the Secretary of the Udupi Lions Club and organized many activities for the club. In 2018, there were floods in Madikeri, and we collected and donated more than one lakh rupees, and relief materials Immediately after retirement, I joined the Udupi Senior Citizen's Association, which had been around for six years with around 100 members. I became a member of the 'Corporation Bank Retired Officers Association' During my retirement, our bank appointed me as an Enquiry Officer to give reports about different disciplinary cases in 2005. In 2015, I became a member of the Indian Red Cross Society in Udupi. Around 2000, I joined the new team of the management of Sri Subramanya Sabha as the Vice President and organized a door-to-door visit in our community to revive membership to the Sabha. In 2005, when I came and settled in Udupi, I was elected President of Sthanika Brahmana Sangha, Udupi, which runs Sri Sharada Mantapa, Jnana Mandira, Sri Sharada monthly newspaper (of which I am a patron) and was the managing trustee of the Sri Sharda Temple. In 2012, under my leadership, we formed the Stanik Brahmana Mahamandala. It is an Association of all our sanghas. I am a life member of Rangabhoomi. I am a member of the Kannada Sahitya Parishad. I am also a member of Ragadhan.

I have written many articles like, 'My views on China and sightseeing places in Beijing and Shanghai' based on my travel experiences in China. I have also authored some books in Kannada such as 'Sri Shankar Acharya is the first Management Guru', 'Basic knowledge of Vedic Mathematics' and 'Tulunadinalli Brahamanya.' I have also contributed articles in Kannada to Sri Sharada, a monthly newspaper, and authored 'America-America' in English about my travel experiences in the US. I am now planning to write on Jyothisha, Panchanga, Kavade bhavisya, Vastu and other subjects.

In my childhood it was a life without a vision, and later working with the bank it became a life with a mission. I enjoyed both these stages and now in retirement, I am content and I feel this is the fruit of good deeds of my earlier years.

This Autobiography is dedicated to C.S. Rao's Grandparents : Gangamma And Gopannayya. Also C.S. Rao acknowledges that this book would not have been possible without the support and encouragements of his wife Sunanda, his Sons Sanjay and Siddhartha, his daughters-in-law Suchithra, Smruthi and Grand Children Sinchana, Smayan, Iian and umika.

This is, in brief, C.S. Rao's Autobiography 'Sarvotham'.

ಮಾರ್ಚ್ 5 ರಂದು ಬೆಳ್ತಂಗಡಿಯಲ್ಲಿ ಜರಗಿದ ವಿಶ್ವಸ್ಥಾನಿಕ ಬ್ರಾಹ್ಮಣ ಸಮಾವೇಶದಲ್ಲಿ ಕಾರ್ಪೊರೇಶನ್ ಬ್ಯಾಂಕಿನ ನಿವೃತ್ತ ಡಿ.ಜಿ.ಎಂ., ಉಡುಪಿ ಸ್ಥಾನಿಕ ಬ್ರಾಹ್ಮಣ ಸಂಘದ ಮಾಜಿ ಅಧ್ಯಕ್ಷ, ಸಾಮಾಜಿಕ ಮುಂದಾಳು ಶ್ರೀ ಸಿ.ಎಸ್. ರಾವ್ "ಸ್ಥಾನಿಕ ರತ್ನ" ಪ್ರಶಸ್ತಿ ಪುರಸ್ಕೃತಗೊಂಡರು.

'ತೈತ್ತಿರೀಯ ಆರಣ್ಯಕ' ದಲ್ಲಿ ಬರುವ ಶುಭ ನುಡಿ : ನಂದಾಮ ಶರದಶ್ಶತಂ, ಮೋದಾಮ ಶರದಶ್ಶತಂ, ಭವಾಮ ಶರದಶ್ಶತಂ, ಶೃಣವಾಮ ಶರದಶ್ಶತಂ, ಪ್ರಬ್ರವಾಮ ಶರದಶ್ಶತಂ, ಜೀತಾಸ್ಯಾಮ ಶರದಶ್ಶತಂ. ಆದ್ದರಿಂದ ಸಿ.ಎಸ್. ರಾಯರು ಮತ್ತು ಅವರ ಕುಟುಂಬ ವರ್ಗದವರು ತಮ್ಮ ಬಂಧು-ಬಾಂಧವರೊಂದಿಗೆ ನೂರು ವರ್ಷ ವೈಭವದಿಂದ ಬಾಳುವಂತಾಗಲಿ, ನೂರು ವರ್ಷ ಮಂಗಳಕರವಾದದ್ದನ್ನು ಕೇಳುವಂತಾಗಲಿ, ಮಧುರ ಮಾತುಗಳನ್ನು ಆಡುವಂತಾಗಲಿ ಮತ್ತು ನೂರು ವರ್ಷ ಅಸುರೀ ಶಕ್ತಿಗಳಿಂದ ಸೋಲದೆಯೆ ಬಾಳುವಂತಾಗಲಿ ಎಂದು ಹಾರೈಸೋಣ.

Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.

Buying and selling shares
as easy as checking your emails
Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan
YOUR GUIDE TO THE FINANCIAL JUNGLE
Visit : www.sharekhan.com
Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)



RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

## ಶ್ರೀ ಕ್ಷೇತ್ರ ಕಟೀಲಿನಲ್ಲಿ ಜಗದ್ಗುರುಗಳು

■...1ನೇ ಪುಟದಿಂದ

ಸಾಕಷ್ಟು ಇದೆ: ಆದರೆ ಐಶ್ವರ್ಯವನ್ನು ಕೊಡು ಎಂದು. ನಾಲ್ಕನೆಯದು-ಕಷ್ಟವೂ ಇಲ್ಲ, ಜ್ಞಾನವೂ ಸಾಕಷ್ಟು ಇದೆ: ಐಶ್ವರ್ಯವೂ ಸಾಕಷ್ಟು ಇದೆ. ಇದಕ್ಕಾಗಿ ನಿನಗೆ ಕೃತಜ್ಞತೆ ಸಲ್ಲಿಸಲು. ಹೀಗೆ ನಾಲ್ಕು ವರ್ಗಗಳಲ್ಲಿ ಭಕ್ತರು ದುರ್ಗೆಯ ಉಪಾಸನೆಯನ್ನು ಮಾಡುತ್ತಾರೆ.

ಶ್ರೀ ದುರ್ಗಾ ಮಾತೆಯ ಆರಾಧನೆ ಬಹಳ ಪ್ರಾಚೀನ ಕಾಲದಿಂದಲೂ ಬಂದಿರುವುದೇ ಆಗಿದೆ. ಶ್ರೀ ಲಲಿತಾ ಸಹಸ್ರನಾಮದಲ್ಲಿ ಬರುವ "ವರ್ಣಾಶ್ರಮ ವಿಧಾಹಿಯಿನ್ಯೈ ನಮ:" ಎಂಬಂತೆ ಇಲ್ಲಿ ವರ್ಣ-ಆಶ್ರಮ ಇವುಗಳ ನಿಜ ಅರ್ಥವನ್ನು ಸರಿಯಾಗಿ ತಿಳಿದುಕೊಂಡಲ್ಲಿ ಜಗತ್ತಿನಲ್ಲಿ ಯಾವುದೇ ಜಗಳವಿಲ್ಲ, ನಿಜಾಜ್ಞಾರೂಪ ನಿಗಮಾಯ್ಯೈ ನಮ: ಇವೆಲ್ಲವೂ ದೇಹಗಳ ಭಾಗಮಾತ್ರವಲ್ಲ; ಭಗವಂತನ ಆಜ್ಞೆ ಕೂಡಾ ಆಗಿದೆ, ಪುಣ್ಯಾಪುಣ್ಯಫಲಪ್ರದಾಯ್ಯೈ ನಮ: ಎಂದರೆ ಫಲವನ್ನು ನೀಡುವವನು ಆ ಭಗವಂತನೇ ಎನ್ನುವುದಾಗಿದೆ. ಉಪದೇಶ ಮತ್ತು ಆಜ್ಞೆಗೆ ವ್ಯತ್ಯಾಸವೂ ಇದೆ. ಉಪದೇಶವೆಂದರೆ ಹೀಗೆ ಮಾಡು ನಿನಗೆ ಒಳ್ಳೆಯದಾಗುವುದೆನ್ನುವ ಭಾವವಾದರೆ ಆಜ್ಞೆಯಲ್ಲಿ ಹೀಗೆಯೇ ಮಾಡು ಮತ್ತು ಮಾಡದಿದ್ದಲ್ಲಿ ಶಿಕ್ಷೆ ಅನುಭವಿಸು ಎನ್ನುವ ಭಾವವಿದೆ. ಧರ್ಮಕಾರ್ಯಗಳು ಸಮರ್ಪಕವಾಗಿ ನೆರವೇರುವುದಕ್ಕಾಗಿಯೇ ವರ್ಣಾಶ್ರಮಗಳ ಸೃಷ್ಟಿಯಾಗಿದೆ. ನಾನಾ ಜಾತಿ ವರ್ಗಗಳಿದ್ದರೂ ಆ ಸಂಘಟನೆಗಳಿಂದ ಸನಾತನ ಧರ್ಮ ಉಳಿದು ಬೆಳೆದು ಬಂದಿದೆ. ಆದ್ದರಿಂದ ಸ್ವಧರ್ಮಾನುಷ್ಠಾನವೇ ಧರ್ಮದ ತಾತ್ಪರ್ಯವಾಗಿದೆ.

ಹೀಗೆಂದು ಶ್ರೀ ಕ್ಷೇತ್ರ ಶೃಂಗೇರಿಯ ದಕ್ಷಿಣಾಮ್ನಾಯ ಪೀಠದ ಜಗದ್ಗುರು ಶ್ರೀಶ್ರೀ ವಿಧುಶೇಖರ ಭಾರತೀ ಮಹಾಸ್ವಾಮೀಜಿಯವರು ಶ್ರೀ ಕ್ಷೇತ್ರ ಕಟೀಲಿನಲ್ಲಿ ಭಕ್ತರನ್ನುದ್ದೇಶಿಸಿ ಆಶೀರ್ವಚನದಲ್ಲಿ ನುಡಿದರು.

ಶ್ರೀ ಕ್ಷೇತ್ರ ಕಟೀಲಿನಲ್ಲಿ ದುರ್ಗೆಯ ರೂಪದಲ್ಲಿ ಜಗನ್ಮಾತೆಯಾಗಿ ಭಕ್ತರನ್ನು ಪೊರೆಯುತ್ತಾ ಬಂದಿದ್ದಾಳೆ. ಇಲ್ಲಿ ಸಂಪ್ರದಾಯಕವಾಗಿ ನಡೆಸಿಕೊಂಡು ಬರುವ ಆಗಮಗಳ ಬಗ್ಗೆ ತಿಳಿಸಿದರು. ಹಿಂದಿನವರು ಹಾಕಿಕೊಟ್ಟ ಈ ಪರಂಪರೆಯನ್ನು ಉಳಿಸಿಕೊಂಡುಬರಬೇಕು. ಈ ದೇಶದಲ್ಲಿ ಇಂತಹ ಹಲವಾರು ಕ್ಷೇತ್ರಗಳಿವೆ. ಅವೆಲ್ಲವೂ ಹಿಂದಿನ ಋಷಿ ಪರಂಪರೆ ಕೊಟ್ಟ ನಡಾವಳಿಗಳನ್ನು ಇಂದಿಗೂ ಆಚರಿಸಿ ಕೊಂಡು ಬರುತ್ತಿದೆ. ಇದನ್ನು ಮುಂದುವರಿಸಿ ಮುಂದಿನ ಪೀಳಿಗೆಗೆ ನೀಡುವುದು ನಮ್ಮೆಲ್ಲರ ಕರ್ತವ್ಯವೂ ಆಗಿದೆ. ಇಂತಹ ಕ್ಷೇತ್ರಗಳ ರಕ್ಷಣೆಯ ಜವಾಬ್ದಾರಿಯೂ ನಮ್ಮದಾಗಿರುತ್ತದೆ. ಶ್ರೀ ಕಟೀಲು ಕ್ಷೇತ್ರದಲ್ಲಿ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಕಾರ್ಯಗಳು ನಿರಂತರ ನಡೆಯುತ್ತಿದೆ. ಇವೆಲ್ಲವೂ ಇನ್ನಷ್ಟು ಅಭಿವೃದ್ಧಿ ಹೊಂದಲಿ. ಮಾತೆ ದುರ್ಗಾದೇವಿಯನ್ನು ನೋಡಬೇಕೆನ್ನುವ ಇಚ್ಛೆ ಇತ್ತು. ಪೂರಕವಾಗಿ ಶ್ರೀ ಕ್ಷೇತ್ರದಿಂದ ಆಹ್ವಾನವೂ ಬಂತು. ಇಂದು ಶ್ರೀ ಕ್ಷೇತ್ರಕ್ಕೆ ಬಂದು ದುರ್ಗಾಮಾತೆಯ ದರ್ಶನದಿಂದ ಸಂತೋಷಗೊಂಡಿದ್ದೇವೆ. ಎಂದು ನುಡಿದರು.

ಶ್ರೀ ಕ್ಷೇತ್ರ ಶೃಂಗೇರಿಯ ದಕ್ಷಿಣಾಮ್ನಾಯ ಪೀಠದ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಶ್ರೀಗಳು ದಿನಾಂಕ 27.04.2023ರ ಸಂಜೆ ಶ್ರೀ ಕ್ಷೇತ್ರ ಕಟೀಲಿಗೆ ತಮ್ಮ ಐತಿಹಾಸಿಕ ಭೇಟಿಗಾಗಿ ಆಗಮಿಸಿದ್ದರು. ಶ್ರೀ ದೇವಸ್ಥಾನದ ದ್ವಾರದಲ್ಲಿ ಶ್ರೀ ಶ್ರೀಗಳನ್ನು ದೇವಳದ ಅನುವಂಶಿಕ ಮುಕ್ತೇಸರರಾದ ಶ್ರೀ ವಾಸುದೇವ ಅಸ್ರಣ್ಣ ಹಾಗೂ ಆಡಳಿತ ಮಂಡಳಿಯ ಕೊಡೆತ್ತೂರು ಗುತ್ತು ಬಿಪಿನ್ ಚಂದ್ರ ಶೆಟ್ಟಿ ಅನುವಂಶಿಕ ಅರ್ಚಕರಾದ ಶ್ರೀ ಲಕ್ಷ್ಮೀನಾರಾಯಣ ಅಸ್ರಣ್ಣ, ವೆಂಕಟರಮಣ ಅಸ್ರಣ್ಣ, ಅನಂತ ಪದ್ಮನಾಭ ಅಸ್ರಣ್ಣ, ಕಮಲಾ ದೇವಿಪ್ರಸಾದ ಅಸ್ರಣ್ಣ, ಕುಮಾರ ಅಸ್ರಣ್ಣ ಮೊದಲಾದವರು ಸೇರಿಕೊಂಡು ಪೂರ್ಣಕುಂಭ ಸ್ವಾಗತ ನೀಡಿದರು. ಹಾಗೆಯೇ ಶ್ರೀ ದೇವಳದ ಆಡಳಿತ ಮಂಡಳಿಯ ಸದಸ್ಯರು, ಮುಕ್ತೇಸರರು, ಗಣ್ಯ ವ್ಯಕ್ತಿಗಳು, ಊರ ಪರವೂರ ಮಹನೀಯರು, ಮಹಿಳೆಯರು, ವಿವಿಧ ಸಂಘಟನೆಗಳ ಪದಾಧಿಕಾರಿಗಳು ಹಾಜರಿದ್ದು ಶ್ರೀ ದೇವಳಕ್ಕೆ ಬರಮಾಡಿಕೊಂಡರು. ಚೆಂಡೆ, ಕೊಂಬು, ಕಹಳೆ, ಮಂಗಳವಾದ್ಯ, ಆನೆ, ತಟ್ಟಿರಾಯ, ಬಿರುದಾವಳಿಗಳಿಂದ ಸ್ವಾಗತಿಸಿ ಶ್ರೀ ದೇವಳದೊಳಗೆ ಕರೆತರಲಾಯಿತು.

ಶ್ರೀ ದೇವಳದಲ್ಲಿ ದುರ್ಗೆಯ ದರ್ಶನಗೈದು ಪೂಜೆಯ ಬಳಿಕ ಶ್ರೀಗಳು ಮೂಲಸ್ಥಾನ ಕುದ್ರುವಿಗೆ ಭೇಟಿ ನೀಡಿದರು. ಶ್ರೀಗಳಿಗೆ ಶ್ರೀ ಕ್ಷೇತ್ರದ ವತಿಯಿಂದ ಬಿನ್ನವತ್ತಳೆ, ಶ್ರೀ ದೇವರ ಶೇಷವಸ್ತ್ರ, ಕಾಣಿಕೆ ನೀಡಿ ಗೌರವಿಸಲಾಯಿತು.

**ಸಭಾ ಕಾರ್ಯಕ್ರಮ :** ನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ಪಾದಧೂಳೀ ಪೂಜೆಯನ್ನು ಶ್ರೀ ಹರಿನಾರಾಯಣದಾಸ ಅಸ್ರಣ್ಣ ದಂಪತಿಗಳು ನೆರವೇರಿಸಿದರು. ಸಭೆಯಲ್ಲಿ ಪ್ರಾಸ್ತಾವಿಕ ಮಾತನಾಡಿದ ಅಸ್ರಣ್ಣರು ಶ್ರೀ ಕ್ಷೇತ್ರಕ್ಕೆ ಎಲ್ಲ ಮಠಗಳ ಸಾಧು ಸಂತರು ಬಂದು ಹೋಗಿರುತ್ತಾರೆ. ಈ ಬಗ್ಗೆ ಇಲ್ಲಿಗೆ ಕೊರತೆಯಾಗಿದ್ದ ಶೃಂಗೇರಿಯ ದಕ್ಷಿಣಾಮ್ನಾಯ ಪೀಠದಿಂದ ಇಂದು ಶ್ರೀಶ್ರೀ ವಿಧುಶೇಖರ ಭಾರತೀ ಶ್ರೀಗಳು ಶ್ರೀ ಕ್ಷೇತ್ರಕ್ಕೆ ಆಗಮಿಸಿ ನಮ್ಮ ಮತ್ತು ಎಲ್ಲ ಭಕ್ತರ ಮನಸ್ಸನ್ನು ಸಂತೋಷಗೊಳಿಸಿದ್ದಾರೆ. ಅವರನ್ನು ಭಕ್ತಿಪೂರ್ವಕವಾಗಿ ಶ್ರೀ ಕ್ಷೇತ್ರಕ್ಕೆ ಸ್ವಾಗತಿಸುತ್ತೇನೆ ಎಂದರು. ಅಲ್ಲದೆ ಶ್ರೀಗಳಿಗೆ ಫಲ ಪುಷ್ಪ, ಕಾಣಿಕೆ ನೀಡಿ ಶ್ರೀ ದೇವಳದ ವತಿಯಿಂದ ಶ್ರೀ ವಾಸುದೇವ ಅಸ್ರಣ್ಣರು ಗೌರವಿಸಿದರು. ಕಟೀಲಿನ ಸನ್ನಿಧಿ ಬ್ರಾಹ್ಮಣ ಸಭಾ (ರಿ.), ಶಿವಳ್ಳಿ ಸ್ಪಂದನ ಕಟೀಲು ವಲಯ, ಸ್ಥಾನಿಕ ಸಂಘಟನೆ ಕಟೀಲು, ಕಟೀಲು ಸಂಸ್ಕೃತ ವಿದ್ಯಾಲಯ, ವಿಶ್ವಹಿಂದೂ ಪರಿಷತ್, ಕಾಳಭೈರವ ಸಂಘಟನೆ ಕಾಸರಗೋಡು. ಸುಬ್ರಹ್ಮಣ್ಯ ಸಭಾ ಮಂಗಳೂರು, ಬೆಳ್ತಂಗಡಿ, ಸುರತ್ಕಲ್, ಮೂಡಬಿದ್ರೆ, ಉಡುಪಿ, ಬ್ರಹ್ಮಾವರ ಮೊದಲಾದ ಸ್ಥಾನಿಕ ಬ್ರಾಹ್ಮಣ ಸಂಘಟನೆಗಳಿಂದ ಶ್ರೀ ಶ್ರೀಗಳಿಗೆ ಫಲ ಪುಷ್ಪ ಕಾಣಿಕೆ ನೀಡಿ ಗೌರವಿಸಲಾಯಿತು. ಶ್ರೀ ಸುಬ್ರಹ್ಮಣ್ಯ ಪ್ರಸಾದ್ ಕೋರ್ಯಾರು ಸ್ವಾಗತಿಸಿದರು. ಶ್ರೀ ರವೀಂದ್ರ ಅತ್ತೂರು ವೇದ ಮಂತ್ರ ಪಠಿಸಿದರು. ಅರ್ಚಕ ಶ್ರೀ ಹರಿ ನಾರಾಯಣ ಅಸ್ರಣ್ಣ ಕಾರ್ಯಕ್ರಮ ನಿರೂಪಿಸಿ ವಂದನಾರ್ಪಣೆ ಮಾಡಿದರು.

**ಬ್ರಾಹ್ಮಣ ಸಭಾದ ಬೇಡಿಕೆ :** ಅಖಿಲ ಕರ್ನಾಟಕ ಬ್ರಾಹ್ಮಣ ಸಭಾದ ಸಹಭಾಗಿತ್ವದೊಂದಿಗೆ ನಡೆದ ಈ ಕಾರ್ಯಕ್ರಮದಲ್ಲಿ ಬ್ರಾಹ್ಮಣ ಸಭಾದ ಸಂಚಾಲಕರಾದ ಶ್ರೀ ಸುಬ್ರಹ್ಮಣ್ಯ ಭಟ್ ಶ್ರೀಗಳಿಗೆ ಫಲ ಪುಷ್ಪ ನೀಡಿ ಗೌರವಿಸಿದರು. ನಂತರ ಮಾತನಾಡಿದ ಬ್ರಾಹ್ಮಣ ಸಭಾದ ಪದಾಧಿಕಾರಿ ಶ್ರೀ ಮಹೇಶ್ ಕಜೆಯವರು ಸಾಮರಸ್ಯವೇ ಮಂತ್ರವಾಗಿರುವ ನಮ್ಮ ಸಂಘಟನೆಗೆ ಶ್ರೀ ಕ್ಷೇತ್ರ ಕಟೀಲಿನ ಶ್ರೀದುರ್ಗಾ ಮಾತೆಯ ಮಡಿಲಲ್ಲಿ ಎಲ್ಲರೂ ಜೊತೆಯಾಗಿದ್ದೇವೆ. ಇಂತಹ ಸಂಗಮ ಕ್ಷೇತ್ರದಲ್ಲಿ ನಮ್ಮ ಈ ಸಂಘಟನೆಗೆ ಇನ್ನಷ್ಟು ಬಲತುಂಬುವಂತೆ ಜಗದ್ಗುರುಗಳ ಆಶೀರ್ವಚನ ನಮ್ಮೆಲ್ಲರಿಗೆ ಶ್ರೀರಕ್ಷೆಯಾಗಲಿ ಎಂದು ಹಾರೈಸಿದರು. ಅದೇ ರೀತಿಯಲ್ಲಿ ಶ್ರೀ ಮಠದ ಆಡಳಿತಾಧಿಕಾರಿ ಶ್ರೀ ಡಾ। ಆರ್ ಗೌರೀಶಂಕರ್ ಅವರನ್ನು ಮತ್ತು ಮಂಗಳೂರಿನ ಶ್ರೀ ಶಾರದಾ ವಿದ್ಯಾಲಯದ ಸಂಸ್ಥಾಪಕರಾದ ಶ್ರೀ ಎಂ.ಬಿ.ಪುರಾಣಿಕ್ ಅವರನ್ನು ಸಭೆಯಲ್ಲಿ ಗೌರವಿಸಲಾಯಿತು.

**ಶ್ರೀ ದೇಗುಲಕ್ಕೆ ಶ್ರೀಗಳಿಂದ ಕಾಣಿಕೆ ಸಮರ್ಪಣೆ :** ಶ್ರೀ ಕ್ಷೇತ್ರ ಕಟೀಲಿಗೆ ಆಗಮಿಸಿದ ಜಗದ್ಗುರುಗಳು ಶ್ರೀ ದುರ್ಗಾಮಾತೆಯ ವಾರ್ಷಿಕ ಒಂದು ದಿನದ ಶಾಶ್ವತ ಪೂಜಾ ಸೇವೆಗಾಗಿ ಬೇಕಾಗುವ ನಗದು ರೂ. ಒಂದು ಲಕ್ಷವನ್ನು ಶ್ರೀ ಕೇತ್ರ ಶೃಂಗೇರಿಯ ವತಿಯಿಂದ ದೇವಳದ ಆಡಳಿತ ಮಂಡಳಿಗೆ ಒಪ್ಪಿಸಿದರು. ಈ ಸಂದರ್ಭದಲ್ಲಿ ಶ್ರೀ ಕ್ಷೇತ್ರ ಶೃಂಗೇರಿಯ ಆಡಳಿತಾಧಿಕಾರಿ ಪದ್ಮಶ್ರೀ ಡಾ। ವಿಆರ್ ಗೌರೀಶಂಕರ್ ಉಪಸ್ಥಿತರಿದ್ದರು.

**ಭಕ್ತರ ಆಗಮನ :** 27ರ ಸಂಜೆ 5.00 ಗಂಟೆಗೆ ಪ್ರಾರಂಭಗೊಂಡು ಶ್ರೀ ಕ್ಷೇತ್ರ ಕಟೀಲಿಗೆ ಭಕ್ತರು ಜಗದ್ಗುರುಗಳನ್ನು ಕಾಣುವ ಉದ್ದೇಶದಿಂದ ಆಸುಪಾಸಿನಿಂದ ಮಾತ್ರವಲ್ಲದೆ, ಉಭಯ ಜಿಲ್ಲೆಯ ದೂರದ ಊರಿನಿಂದಲೂ ಆಗಮಿಸಿದ್ದರು. ಶ್ರೀ ಕ್ಷೇತ್ರ ಶೃಂಗೇರಿಯ ಧರ್ಮಾಧಿಕಾರಿಗಳಾದ ಶ್ರೀ ಸತ್ಯಶಂಕರ ಬೊಳ್ಳಾವ, ಉಡುಪಿ ಪ್ರಾಂತ್ಯದ ಧರ್ಮಾಧಿಕಾರಿ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರೀ, ಶಂಕರ ತತ್ವ ಪ್ರಸಾರ ಅಭಿಯಾನದ ದ.ಕ. ಜಿಲ್ಲಾ ಸಂಚಾಲಕರಾದ ಶ್ರೀ ಕರುಣ್ ರಾವ್ ಬೆಳ್ಳೆ, ಉಡುಪಿ ಸಂಚಾಲಕರಾದ ಶ್ರೀ ವಿಶ್ವನಾಥ ಶ್ಯಾನುಭಾಗ್, ಕಸಾಪ ಪೂರ್ವಾಧ್ಯಕ್ಷರಾದ ಶ್ರೀ ಹರಿಕೃಷ್ಣ ಪುನರೂರು, ಕಿನ್ನಿಗೋಳಿಯ ಯುಗಪುರುಷದ ಶ್ರೀ ಭುವನಾಭಿರಾಮ ಉಡುಪ, ಮೂಡಬಿದ್ರೆಯ ಧನಲಕ್ಷ್ಮೀ ಖ್ಯಾಶ್ಯೂಸ್‌ನ ಶ್ರೀಪತಿಭಟ್, ಶಿವಳ್ಳಿ ಸ್ಪಂದನದ ಶ್ರೀ ಅನಂತ ಪದ್ಮನಾಭ ಭಟ್, ನಂದಿನಿ ಬ್ರಾಹ್ಮಣ ಸಭಾದ ಡಾ। ಪದ್ಮನಾಭ ಭಟ್, ಶ್ರೀದೇವಳದ ವಿಶೇಷಾಧಿಕಾರಿ ಮೋಹನ್ ರಾವ್, ಇನ್ನಿತರ ಹಲವಾರು ಸಂಘಟನೆಗಳ ಪದಾಧಿಕಾರಿಗಳು, ಹಾಗೂ ಉಭಯ ಜಿಲ್ಲೆಗಳ ಸ್ಥಾನಿಕ ಸಂಘಟನೆಗಳ ಪದಾಧಿಕಾರಿಗಳು ಮತ್ತು ಸದಸ್ಯರು ಪಾಲ್ಗೊಂಡು ಜನಸಾಗರವೇ ತುಂಬಿಕೊಂಡಿದ್ದು ವಿಶೇಷವಾಗಿತ್ತು.

**ವರದಿ : ಕೃಷ್ಣಕುಮಾರ್ ರಾವ್ ಮಟ್ಟು**

## ಶ್ರೀ ಶಾರದಾ ಮಂಟಪದ ನವೀಕೃತ ಹವಾನಿಯಂತ್ರಿತ ಸಭಾಂಗಣದ ಉದ್ಘಾಟನೆ

■...1ನೇ ಪುಟದಿಂದ

ಮುಖ್ಯ ಅತಿಥಿಗಳಾಗಿದ್ದ ಉಡುಪಿಯ ಇಂಚರ ಸರ್ಜಿಕಲ್ ಕ್ಲಿನಿಕ್‌ನ ಖ್ಯಾತ ಸರ್ಜನ್ ಡಾ। ವೈ.ಸುದರ್ಶನ್ ರಾವ್ ಸಮಯೋಚಿತವಾಗಿ ಮಾತನಾಡಿ ಆಡಳಿತ ಮಂಡಳಿಯ ಯೋಗ್ಯ ತೀರ್ಮಾನದ ಮೂಲಕ ನವೀಕರಿಸಿದ ಸುಸಜ್ಜಿತವಾದ ಕಲ್ಯಾಣ ಮಂಟಪವನ್ನು ಇಂದು ಲೋಕಾರ್ಪಣೆ ಮಾಡುತ್ತಿದೆ. ಅದಕ್ಕಾಗಿ ಸಮಾಜವೇ ಇಂದು ಹೆಮ್ಮೆ ಪಡುವಂತಾಗಿದೆ ಎಂದು ಶ್ಲಾಘಿಸಿದರು.

ಸಂಘದ ಪೂರ್ವಾಧ್ಯಕ್ಷ ಶ್ರೀ ಸಿ ಎಸ್ ರಾವ್ ಮಾತನಾಡಿ ಕ್ಲಪ್ತ ಸಮಯದಲ್ಲಿ ಕೆಲಸವನ್ನು ಮುಗಿಸಿದ್ದಕ್ಕಾಗಿ ಪದಾಧಿಕಾರಿಗಳು ಮತ್ತು ಸಂಬಂಧಪಟ್ಟ ಎಲ್ಲರಿಗೆ ಕೃತಜ್ಞತೆ ಸಲ್ಲಿಸಿದರು.

ಮುಖ್ಯ ಅತಿಥಿಗಳಾಗಿದ್ದ ಉಡುಪಿಯ ಖ್ಯಾತ ಉದ್ಯಮಿ ಶ್ರೀ ನಿತ್ಯಾನಂದ ಕಾಮತ್, ಪೂರ್ವಾಧ್ಯಕ್ಷರುಗಳಾದ ಶ್ರೀ ಪಾಲಚಂದ್ರ ರಾವ್, ಶ್ರೀ ವೈ.ಭುವನೇಂದ್ರರಾವ್, ಉಪಾಧ್ಯಕ್ಷರಾದ ಶ್ರೀ ಯು. ಅರವಿಂದ ಕುಮಾರ್, ಶ್ರೀ ಜಯರಾಮರಾವ್, ಕೋಶಾಧಿಕಾರಿ ಸಿಎ ಗಣೇಶ್ ಹೆಬ್ಬಾರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಭಾಭವನದ ಕಾಮಗಾರಿಗಾಗಿ ಬಹಳಷ್ಟು ಜನ ಹಗಲು-ರಾತ್ರಿ ಅವಿರತ ಕೆಲಸ ಮಾಡಿದ್ದು, ಮುಖ್ಯರಾದವರನ್ನು ಸಂಘದ ಕಾರ್ಯದರ್ಶಿ ಶ್ರೀ ಪ್ರಭಾಕರ ಭಂಡಿ ವೇದಿಕೆಗೆ ಆಹ್ವಾನಿಸಿದರು. ಅಂತೆಯೇ ಕಟ್ಟಡದ ಮುಖ್ಯ ಇಂಜಿನಿಯರ್ ಶ್ರೀ ನಂದಕಿಶೋರ್ ಉಡುಪಿಯ ಶಾಂತಾ ಇಲೆಕ್ಟ್ರಿಕಲ್ಸ್‌ನ ಶ್ರೀ ಶ್ರೀಪತಿ ಭಟ್, ಹವಾನಿಯಂತ್ರಣ ಕಾಮಗಾರಿಯ ಶ್ರೀ ಅಶಿತ್ ಶೆಟ್ಟಿ, ಶ್ರೀ ಗುರು ಇಂಜಿನಿಯರಿಂಗ್ ವರ್ಕ್ಸ್‌ನ ಶ್ರೀ ವಸಂತ ಪೂಜಾರಿ, ರೇಡಿಯೆಂಟ್ ಇಂಟೀರಿಯರ್ಸ್‌ನ ಶರಣ್ ಶೆಟ್ಟಿ, ಉಡುಪಿ ಅಲ್ಯುಮೀನಿಯಂ ವರ್ಕ್ಸ್‌ನ ಶ್ರೀ ಸುರೇಶ್ ನಾಯಕ್, ಪೈಂಟಿಗ್ಸ್ ವರ್ಕ್ಸ್‌ನ ಶ್ರೀ ಕೃಷ್ಣಪ್ಪ ಕೋಟ್ಯಾನ್ ಮೊದಲಾದವರನ್ನು ಸ್ವಾಮೀಜಿಗಳ ಸಮ್ಮುಖದಲ್ಲಿ ಶಾಲು, ಸ್ಮರಣಿಕೆ ನೀಡಿ ಗೌರವಿಸಲಾಯಿತು.

ಸಭೆಯ ಅಧ್ಯಕ್ಷತೆ ನಿರ್ವಹಿಸಿದ್ದ ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್ ಎಲ್ಲರನ್ನು ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿ ಸಂಘದ ಪ್ರಾರಂಭದಿಂದ ಇದುವರೆಗೂ ನಡೆಸಿಕೊಂಡು ಬರುವ ಆಚರಣೆಗಳು, ಮತ್ತು ಸಮಾಜಿಕ ಚಟುವಟಿಕೆಗಳನ್ನು ವಿವರಿಸಿ, ಅದಕ್ಕಾಗಿ ಅವಿರತವಾಗಿ ಶ್ರಮಿಸಿದ್ದ ಹಿಂದಿನ ಎಲ್ಲಾ ಅಧ್ಯಕ್ಷರು ಮತ್ತು ಪದಾಧಿಕಾರಿಗಳನ್ನು ಸ್ಮರಿಸಿದರು. ಶ್ರೀಮತಿ ವಿದ್ಯಾ ಎಸ್ ರಾವ್, ಶ್ರೀಮತಿ ಜಯಲಕ್ಷ್ಮೀ ಮುರಳೀಧರ್ ರಾವ್, ಶ್ರೀಮತಿ ಉಷಾ ಶ್ಯಾನುಭಾಗ್, ಶ್ರೀಮತಿ ಮಮತಾ ರಾವ್ ಇವರು ದೇವತಾ ಪ್ರಾರ್ಥನೆ ನೆರವೇರಿಸಿದರು. ಜೊತೆ ಕಾರ್ಯದರ್ಶಿ ವಿನೋದ್ ಕುಮಾರ್ ಧನ್ಯವಾದವಿತ್ತರು. ನಿರ್ದೇಶಕ ಕೃಷ್ಣಕುಮಾರ್ ರಾವ್ ಮಟ್ಟು ಕಾರ್ಯಕ್ರಮ ನಿರ್ವಹಣೆ ಮಾಡಿದ್ದರು.

ಪೇಜಾವರ ಮಠಾಧೀಶರು ಮೊದಲಿಗೆ ಶ್ರೀ ಶಾರದಾ ಮಂಟಪಕ್ಕೆ ಬಂದಾಗ ಮಂಗಳವಾದ್ಯ, ಸಹಿತ ಪೂರ್ಣಕುಂಭ ಸ್ವಾಗತ ನೀಡಲಾಯಿತು. ಶ್ರೀ ಶಾರದಾ ಮಂದಿರದಲ್ಲಿ ಶ್ರೀ ಶಾರದಾ ಮಾತೆಯ ದರ್ಶನ, ಪೂಜೆ ನೆರವೇರಿಸಿದ ಶ್ರೀಗಳು ನೂತನ ಸಭಾಂಗಣವನ್ನು ತಮ್ಮ ದಿವ್ಯ ಹಸ್ತದಿಂದ ಜ್ಯೋತಿ ಬೆಳಗಿಸಿ ಉದ್ಘಾಟಿಸಿದರು. ಅಧ್ಯಕ್ಷ ಶ್ರೀ ಮಂಜುನಾಥ ಹೆಬ್ಬಾರ್ ಮತ್ತು ಎಲ್ಲ ಪದಾಧಿಕಾರಿಗಳು ಜೊತೆಯಾಗಿ ಶ್ರೀಗಳಿಗೆ ಫಲ ಪುಷ್ಪ ಕಾಣಿಕೆ ಸಮರ್ಪಣೆ ಮಾಡಿದರು. ನಂತರ ಶ್ರೀಗಳು ಸಭೆಯನ್ನುದ್ದೇಶಿಸಿ ಆಶೀರ್ವಚನವನ್ನು ನೀಡಿದರು.

ಶ್ರೀ ಶಾರದಾ ಮಂಟಪದ ನೂತನ ಹವಾನಿಯಂತ್ರಿತ ಸಭಾಭವನದ ಉದ್ಘಾಟನೆಯ ಬಗ್ಗೆ ಸಾಕಷ್ಟು ಪ್ರಚಾರ ಮೊದಲೇ ಆಗಿರುವುದರಿಂದ ಸಮಾಜ ಬಾಂಧವರಲ್ಲದೆ ಆಸುಪಾಸಿನಿಂದಲೂ ಬಹಳಷ್ಟು ಜನರು ಕುತೂಹಲದಿಂದ ಸಮಾರಂಭಕ್ಕೆ ಹಾಜರಾಗಿದ್ದು ಸಭಾಭವನ ಕಿಕ್ಕಿರಿದು ತುಂಬಿತ್ತು. ಉಡುಪಿಯ ಮತ್ತು ನಮ್ಮ ಸಮಾಜದ ಅನೇಕ ಗಣ್ಯ ವ್ಯಕ್ತಿಗಳು ಆಗಮಿಸಿದ್ದು, ಸಭಾಭವನದ ಅಂದ ಮತ್ತು ಅನುಕೂಲತೆಗಳ ಬಗ್ಗೆ ಸಂತಸ ವ್ಯಕ್ತಪಡಿದರು. ಒಟ್ಟಿನಲ್ಲಿ ಅತ್ಯಂತ ಕಡಿಮೆ ಅವಧಿಯಲ್ಲಿ ಕೇವಲ 54 ದಿನಗಳ ನಡುವಿನ ಅವಧಿಯಲ್ಲಿ ನಡೆದ ಸಭಾಭವನದ ನವೀಕರಣ ಕಾರ್ಯವನ್ನು ಕೈಗೊಂಡ ಬಗ್ಗೆ ಆಡಳಿತ ಮಂಡಳಿಗೆ ಧನ್ಯತಾ ಭಾವವಿದೆ. ಸಂಜೆ ಆಗಮಿಸಿದ್ದ ಎಲ್ಲರಿಗೆ ಉಪಾಹಾರದೊಂದಿಗೆ ಅಂದಿನ ಕಾರ್ಯಕ್ರಮ ಸಂಪನ್ನಗೊಂಡಿತು.

## ನಿಧನ



ನಾಟಿವೈದ್ಯೆಯಾಗಿ ಭಾರತದಾದ್ಯಂತ ಪ್ರಸಿದ್ಧಿಯನ್ನು ಪಡೆದಿದ್ದ ನಂದಿಕೂರು ಗ್ರಾಮದ ದೇವಿಕೃಪಾ ನಿವಾಸಿ, ದಿ। ಕಟೀಲು ಅಪ್ಪುರಾಯರ ಪತ್ನಿ ರತ್ನಮ್ಮ (83) ತಾ.13.04.2023ರಂದು ಹೃದಯಾಘಾತದಿಂದ ಸ್ವಗೃಹದಲ್ಲಿ ನಿಧನರಾದರು. ಅವರಿಗೆ ಮೂವರು ಪುತ್ರರು ಇದ್ದಾರೆ.

ತಮ್ಮ ಹಿರಿಯರಿಂದಲೇ ಬಳುವಳಿಯಾಗಿ ಬಂದಿದ್ದ ನಾಟಿವೈದ್ಯ ಪದ್ಧತಿಯೊಂದಿಗೆ ಹೊಟ್ಟೆಯಲ್ಲಿನ ವಿಷಕಾರಿ ಪದಾರ್ಥಗಳನ್ನು ವಾಂತಿ ಮಾಡಿಸುತ್ತಲೇ ಅವರು ಹೊರತೆಗೆಸುತ್ತಿದ್ದರು. ಅವರ ಜನಸೇವೆಯನ್ನು ಉಡುಪಿಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಆಸ್ಪತ್ರೆಯ ಜಾನಪದ ವೈದ್ಯಕೀಯ ಸಂಶೋಧನಾ ಕೇಂದ್ರವೂ ಗುರುತಿಸಿ ಶ್ಲಾಘಿಸಿತ್ತು. ಮುಂದೆ ಇದನ್ನೂ ಬಳುವಳಿಯಾಗಿ ತನ್ನ ಪುತ್ರನೊಬ್ಬನಿಗೆ ಉಪದೇಶಿಸಿರುವ ರತ್ನಮ್ಮ ನಾಟಿ ವೈದ್ಯ ಪದ್ಧತಿಗೆ ಅಳಿವಿಲ್ಲ ಎಂಬುದನ್ನೂ ತನ್ನ ಜೀವಮಾನವಿಡೀ ಪ್ರತಿಪಾದಿಸುತ್ತಲೇ ಬಂದಿದ್ದರು.

**** ****




ದಿ। ಶ್ರೀ ಬೋಳ ಮೋಹನ್ ರಾವ್ ಅವರ ಪತ್ನಿ ಶ್ರೀಮತಿ ವಿಜಯ ರಾವ್ ಅವರು ತಮ್ಮ 77ನೇ ವಯಸ್ಸಿನಲ್ಲಿ ತಾ.24.04.2023 ರಂದು ಮುಂಬೈನಲ್ಲಿ ನಿಧನರಾದರು. ಅವರು ಒಬ್ಬ ಪುತ್ರ ಹಾಗೂ ಪುತ್ರಿಯನ್ನು ಅಗಲಿದ್ದಾರೆ.

**** ****



ಶ್ರೀ ಉಳ್ಳೂರು ಆರ್. ವಾಸುದೇವ ರಾವ್ ಅವರ ಪತ್ನಿ ಶ್ರೀಮತಿ ಶಾಂತ ಅವರು ತಮ್ಮ 70ನೇ ವಯಸ್ಸಿನಲ್ಲಿ ತಾ.23.04.2023 ರಂದು ಮಣಿಪಾಲದಲ್ಲಿ ನಿಧನರಾದರು. ಅವರು ಓರ್ವ ಮಗ, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

**** ****



ಶ್ರೀ ಕೆ.ಎಲ್. ಶ್ರೀಪತಿ ರಾವ್ ಅವರು ತಮ್ಮ 85ನೇ ವಯಸ್ಸಿನಲ್ಲಿ ತಾ.20.04.2023ರಂದು ಬೋರಿವಿಲಿ (ಡಬ್ಲ್ಯೂ) ಮುಂಬೈಯಲ್ಲಿ ನಿಧನರಾದರು. ಅವರು ಪತ್ನಿ, ಇಬ್ಬರು ಪುತ್ರರನ್ನು ಅಗಲಿದ್ದಾರೆ.

**** ****




ಡಾ. ಮಾಧವ ಮಾಣಿಕಳ ಅವರು ತಮ್ಮ 87ನೇ ವಯಸ್ಸಿನಲ್ಲಿ ತಾ.28.04.2023ರಂದು ಯು.ಎಸ್.ಎ.ಯಲ್ಲಿ ನಿಧನರಾದರು. ಅವರು ತಮ್ಮ ಪತ್ನಿ ಶ್ರೀಮತಿ ವತ್ಸಲಾ ತುದಿಯಡ್ಕ ಮತ್ತು ಇಬ್ಬರು ಗಂಡು ಮಕ್ಕಳನ್ನು ಅಗಲಿದ್ದಾರೆ. ಅವರು ಮುಂಬೈನ ಜಸ್ಲೋಕ್ ಆಸ್ಪತ್ರೆಯ ಪ್ರಖ್ಯಾತ ನರರೋಗ ತಜ್ಞರಾಗಿದ್ದರು.

**** ****



ಶ್ರೀ ಹತ್ರಿಂಜ ಸುಬ್ರಹ್ಮಣ್ಯ ರಾವ್ (ಗುಳಿಕಂದ ಮನೆ ಬೆಳ್ತಂಗಡಿ ತಾಲೂಕು) ಅವರು ತಮ್ಮ 70ನೇ ವಯಸ್ಸಿನಲ್ಲಿ ತಾ.03.05.2023 ರಂದು ನಿಧನರಾದರು. ಅವರು ಪತ್ನಿ ಮತ್ತು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

**** ****



ಶ್ರೀ ಸೂರ್ಯನಾರಾಯಣ ರಾವ್ ಉಬರಳೆ (ದಿ। ಶ್ರೀ ರಾಮಕೃಷ್ಣ ರಾವ್ ಮತ್ತು ಶ್ರೀಮತಿ ನಳಿನಿ ರಾವ್ ಅವರ ಪುತ್ರ) ಅವರು ತಮ್ಮ 66ನೇ ವಯಸ್ಸಿನಲ್ಲಿ ತಾ.08.05.2023 ರಂದು ಮಂಗಳೂರಿನಲ್ಲಿ ನಿಧನರಾದರು. ಅವರು ತಮ್ಮ ಪತ್ನಿ, ಮಗ ಮತ್ತು ಒಬ್ಬ ಮಗಳನ್ನು ಅಗಲಿದ್ದಾರೆ.

**** ****



ದಿ। ಶ್ರೀ ಉಡುಪಿ ಬೈಲಕೆರೆ ಜಯಂತ್ ರಾವ್ ಅವರ ಪತ್ನಿ ಶ್ರೀಮತಿ ಸುಲೋಚನಾ ರಾವ್ ಅವರು ತಮ್ಮ 80ನೇ ವಯಸ್ಸಿನಲ್ಲಿ ತಾ.10.05.2023 ರಂದು ಉಡುಪಿಯಲ್ಲಿ ನಿಧನರಾದರು. ಅವರು ಮೂವರು ಹೆಣ್ಣು ಮಕ್ಕಳನ್ನು ಅಗಲಿದ್ದಾರೆ.

### ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 4-00ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ "**ಪಾರಾಯಣ**" ಸಂಜೆ ಗಂಟೆ 4-00ರಿಂದ

**ತಾ.07-06-2023 ಸಂಕಷ್ಟಹರ ಚತುರ್ಥಿಯಂದು "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.100/-)**

**ತಾ.05-06-2023 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.24-05-2023 ಮತ್ತು ತಾ.08-06-2023 ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

### ವೃಷಭ ಮಾಸದ ವಿಶೇಷ ದಿನಗಳು

| | | | |
|---|---|---|---|
| 15.05.2023 | ವೃಷಭ ಸಂಕ್ರಮಣ, ಸರ್ವೈಕಾದಶಿ | 05.06.2023 | ಗ್ರೀಷ್ಮ ಋತು ಜ್ಯೇಷ್ಠ ಮಾಸದ ಕೃಷ್ಣ ಪಕ್ಷಾರಂಭ |
| 19.05.2023 | ಅಮಾವಾಸ್ಯೆ | | |
| 20.05.2023 | ಗ್ರೀಷ್ಮ ಋತು ಜ್ಯೇಷ್ಠ ಮಾಸದ ಶುಕ್ಲ ಪಕ್ಷಾರಂಭ | 07.06.2023 | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 10.26 |
| 25.05.2023 | ಪತ್ತನಾಜೆ | 14.06.2023 | ಸರ್ವೈಕಾದಶಿ |
| 31.05.2023 | ಸರ್ವೈಕಾದಶಿ | 15.06.2023 | ಮಿಥುನ ಸಂಕ್ರಮಣ |
| 04.06.2023 | ಹುಣ್ಣಿಮೆ | 18.06.2023 | ಅಮಾವಾಸ್ಯೆ |

## ಶ್ರೀ ಶಂಕರ ಜಯಂತಿ – ರಸಪ್ರಶ್ನೆ ಸ್ಪರ್ಧೆ ಫಲಿತಾಂಶ

ಜಗದ್ಗುರು ಶ್ರೀ ಶಂಕರಾಚಾರ್ಯ ಜಯಂತಿ ಪ್ರಯುಕ್ತ ಉಡುಪಿ ಜಿಲ್ಲಾ ಶ್ರೀ ಶಾಂಕರ ತತ್ವ ಪ್ರಸಾರ ಅಭಿಯಾನ ಮತ್ತು ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)ಕುಂಜಿಬೆಟ್ಟು ಉಡುಪಿ ಇವರ ಸಂಯುಕ್ತ ಆಶ್ರಯದಲ್ಲಿ ದಿನಾಂಕ 25.04.2023ರ ಬೆಳಿಗ್ಗೆ 10 ಗಂಟೆಗೆ ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ಮಂಟಪದಲ್ಲಿ ಆಯೋಜಿಸಲಾಗಿದ್ದ ಉಡುಪಿ ಜಿಲ್ಲಾ ಮಟ್ಟದ ರಸಪ್ರಶ್ನೆ ಸ್ಪರ್ಧೆಯಲ್ಲಿ ಪ್ರಾಥಮಿಕ ವಿಭಾಗದಲ್ಲಿ ಅಶಿತಾ ಅಕ್ಷಯ್ ಭಟ್ ಉಡುಪಿ ಪ್ರಥಮ ಬಹುಮಾನ, ಅದಿಥಿ ದೀಪಕ್ ಹೆಬ್ಬಾರ್ ಉಡುಪಿ ದ್ವಿತೀಯ ಬಹುಮಾನವನ್ನೂ, ಹಿರಿಯ ವಿಭಾಗದಲ್ಲಿ ಶ್ರೀಮತಿ ಗೀತಾ ರಾವ್ ಇಂದ್ರಾಳಿ ಪ್ರಥಮ ಬಹುಮಾನ, ಶ್ರೀಮತಿ ಗಿರಿಜಾ ಬ್ರಹ್ಮಾವರ ದ್ವಿತೀಯ ಬಹುಮಾನ, ಹಾಗೂ ಶ್ರೀ ಶಿರೀಶ್ ಪರ್ಕಳ ತೃತೀಯ ಬಹುಮಾನವನ್ನೂಪಡೆದಿರುತ್ತಾರೆ. ಮಧ್ಯಾಹ್ನ ನಡೆದ ಸಮಾರಂಭದಲ್ಲಿ ವಿಜೇತರಿಗೆ ನಗದು ಬಹುಮಾನ ವಿತರಿಸಲಾಯಿತು. ಶ್ರೀ ಕೃಷ್ಣಕುಮಾರ್ ರಾವ್ ಮಟ್ಟು ಆಯೋಜಿಸಿದ್ದ ಈ ಸ್ಪರ್ಧೆಗೆ ಪ್ರಭಾಕರ್ ಭಂಡಿ, ವಿನೋದ್ ರಾವ್, ವಿಶ್ವನಾಥ ಶ್ಯಾನುಭಾಗ್,ಮೀರಾ ರಾಜೇಶ್ ಸಹಕರಿಸಿದ್ದರು.

## ನಾರಾವಿ : ಶ್ರೀ ಶಂಕರ ಜಯಂತಿ

ದಿನಾಂಕ 26.04.2023ರಂದು ನಮ್ಮ ಸಭಾದ ವತಿಯಿಂದ ಶಂಕರ ಜಯಂತಿಯನ್ನು ಆಚರಿಸಲಾಯಿತು. ನಾರಾವಿ ವಲಯಾಧ್ಯಕ್ಷರಾದ ಶ್ರೀ ವಸಂತ ರಾವ್‌ರವರು ದೀಪ ಪ್ರಜ್ವಲನೆ ಮಾಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಧರ್ಮಸ್ಥಳ, ಉಜಿರೆ, ಬೆಳ್ತಂಗಡಿ, ನಾರಾವಿ, ಬಂಗಾಡಿ ವಲಯದ ಸದಸ್ಯರಿಂದ ಭಜನಾ ಕಾರ್ಯಕ್ರಮ ನಡೆಯಿತು. ತದನಂತರ ಶ್ರೀ ಅಜೇಯ ಹೆಬ್ಬಾರ್ ರವರ ನೇತೃತ್ವದಲ್ಲಿ ಸಾಮೂಹಿಕವಾಗಿ ಶಂಕರ ಅಷ್ಟೋತ್ತರ ಪಠಣ ನಡೆಯಿತು. ಮಂಗಳದೊಂದಿಗೆ ಮಂಗಳಾರತಿ ಬೆಳಗಲಾಯಿತು. ಸುಮಾರು 50 ಸದಸ್ಯರು ಭಾಗವಹಿಸಿದ್ದರು.








*With Best Complimemts From*

SRI M. SHAILESH RAO Ph : 9448624324

B.E., Civil

Civil Engineer & Contractor

**SRI MALAVIKA ASSOCIATES**

KALSANKA-UDUPI ROAD, UDUPI.

Website : shreemaalavikaassociates.com



## ಸಹಸ್ರಚಂದ್ರ ದರ್ಶನ ಶಾಂತಿ ಹೋಮ



ತಾ.01.05.2023 ರಂದು ಪಿ. ಬಾಲಗಂಗಾಧರ ಅವರ ಸಹಸ್ರಚಂದ್ರ ದರ್ಶನ ಶಾಂತಿ ಹೋಮ ಹಾಗೂ ಪಿ. ಬಾಲಗಂಗಾಧರ ಮತ್ತು ಶ್ರೀಮತಿ ಪ್ರಸನ್ನ ಅವರ ವೈವಾಹಿಕ ಸುವರ್ಣ ಸಂಭ್ರಮಗಳು ಬೆಂಗಳೂರು ಜ್ಞಾನಶಕ್ತಿ ದೇವಸ್ಥಾನದಲ್ಲಿ ತಮ್ಮ ಮಕ್ಕಳು, ಮೊಮ್ಮಕ್ಕಳೊಂದಿಗೆ ಬಂಧು ಮಿತ್ರರೊಂದಿಗೆ ಆಚರಿಸಿದರು.

## ಶ್ರೀ ಬಾಲಗಣಪತಿ ಪ್ರಸನ್ನಪಾರ್ವತಿ ದೇವಸ್ಥಾನ : ಶ್ರೀ ಶಂಕರ ಜಯಂತಿ

ತಾ.25.04.2023 ಮಂಗಳವಾರ ಪಡುಬಿದ್ರಿಯ ಶ್ರೀ ಬಾಲಗಣಪತಿ ಪ್ರಸನ್ನಪಾರ್ವತಿ ದೇವಸ್ಥಾನದಲ್ಲಿ ಸಂಜೆ 6 ಗಂಟೆಯಿಂದ "ಶ್ರೀ ಶಂಕರಾಚಾರ್ಯ ಜಯಂತಿ ಮಹೋತ್ಸವ" ವನ್ನು ನಡೆಸಲಾಯಿತು. ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಪಡುಬಿದ್ರಿ ಇದರ ಮಹಿಳಾ ಸದಸ್ಯೆಯರಿಂದ ಭಜನೆ ಹಾಗೂ ಗುರುಗಳ ಅಷ್ಟೋತ್ತರದೊಂದಿಗೆ ಪ್ರಾರಂಭವಾದ ಕಾರ್ಯಕ್ರಮವು ಶ್ರೀ ಶಂಕರಾಚಾರ್ಯರ ಕಲ್ಪೋಕ್ತ ಪೂಜೆ, ಮಂಗಳಾರತಿಗಳೊಂದಿಗೆ ಸಂಪನ್ನಗೊಂಡಿತು.

## ಬ್ರಹ್ಮೋಪದೇಶ

ಶ್ರೀ ಪ್ರದೀಪ್ ಕುಮಾರ್ ಮತ್ತು ಶ್ರೀಮತಿ ನಾಗಶ್ರೀ ದಂಪತಿಯ ಎರಡನೇ ಪುತ್ರ ಚಿ। ಸುಮಂತ್ ಕುಮಾರ್ ಅವರ ಉಪನಯನವು ತಾ.03.05.2023 ರಂದು ಶ್ರೀ ಜ್ಞಾನಶಕ್ತಿ ಮಂಟಪ ಕೊಡಿಗೇಹಳ್ಳಿ ಬೆಂಗಳೂರಿನಲ್ಲಿ ನೆರವೇರಿತು.

**** ****

ಶ್ರೀ ರಾಮಕೃಷ್ಣ ಮತ್ತು ಶ್ರೀಮತಿ ಅಶ್ವಿನಿ ದಂಪತಿಯ ಪುತ್ರ ಹಾಗೂ ಶ್ರೀ ಪದ್ಮನಾಭಯ್ಯ ಉಬರಳೆ ಮತ್ತು ಶ್ರೀಮತಿ ಲಾವಣ್ಯ ಅವರ ಮೊಮ್ಮಗ ಚಿ। ಅಭಿರಾಮ ಅವರ ಉಪನಯನವು ತಾ.03.05.2023 ರಂದು ಕಡಬ-ಮರ್ದಾಳ ನಾಡುಕಾಯೊಳ್ಳೆ ಉಬರಳೆ ನಿವಾಸದಲ್ಲಿ ನೆರವೇರಿತು.

**** ****

ಶ್ರೀ ಕಿರಣ್ ಕುಂಜೂರು ಮತ್ತು ಶ್ರೀಮತಿ ರಮ್ಯಾ ದಂಪತಿಯ ಪುತ್ರ ಚಿ। ರಿತ್ವಿಕ್ ಅವರ ಉಪನಯನವು ತಾ. 07.05.2023 ರಂದು ಬೆಂಗಳೂರಿನ ಯಲಹಂಕದ ಶ್ರೀ ಗೌರಿಶಂಕರ ಸಮುದಾಯ ಭವನದಲ್ಲಿ ನೆರವೇರಿತು. ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವರು ವಟುವಿನ ಮೇಲೆ ಅವರ ಆಯ್ಕೆಯ ಅನುಗ್ರಹವನ್ನು ಕರುಣಿಸಲಿ.

**** ****

ಕೀರ್ತಿ ಶೇಷ ಕುಕ್ಕೆಹಳ್ಳಿ ಸದಾಶಿವ ರಾವ್‌ರ ಪೌತ್ರ, ಶ್ರೀ ಕೃಷ್ಣರಾಜ ರಾವ್ ಮತ್ತು ಶ್ರೀಮತಿ ವೀಣಾ ಇವರ ಪುತ್ರ ಚಿ। ಪ್ರೀತಮ್ ನ ಬ್ರಹ್ಮೋಪದೇಶವು ತಾ.07.05.2023 ರಂದು ಉಡುಪಿ ಚಿಟ್ಪಾಡಿ ಶ್ರೀ ಶಾರದಾಂಬಾ ದೇವಸ್ಥಾನದಲ್ಲಿ ಜರಗಿತು.

**** ****

ಶ್ರೀಮತಿ ಶೀತಲ್ ಹಾಗೂ ಚಂದ್ರಕಾಂತ್ ಎಸ್.ರಾವ್‌ರವರ ಪುತ್ರ ಚಿ। ತನಿಷ್‌ನ ಬ್ರಹ್ಮೋಪದೇಶವು ತಾ.12.05.2023ರಂದು ಉಡುಪಿ ಅಂಬಲ್ಪಾಡಿ ಜನಾರ್ದನ ಮಹಾಕಾಳಿ ದೇವಸ್ಥಾನದ ಬಳಿ ವಸಂತ ಮಂಟಪದಲ್ಲಿ ಜರಗಿತು.

## ಗೃಹ ಪ್ರವೇಶ ಸಮಾರಂಭ

ಶ್ರೀಯುತ ನಿಟ್ಟೆ ಕೆಮ್ಮಣ್ಣು ಉಮೇಶ ರಾಯರು ಥಾಣೆ ಮುಂಬೈಯ ರಿವರ್ ವುಡ್ ಪಾರ್ಕ್ ಟವರ್ 2 ನಲ್ಲಿ ಖರೀದಿಸಿದ ನೂತನ ಗೃಹದ ಪ್ರವೇಶೋತ್ಸವ ಸಮಾರಂಭವನ್ನು ತಾ.10.05.2023 ರಂದು ಬಂಧು ಮಿತ್ರರನ್ನು ಆಮಂತ್ರಿಸಿ ವಿಜೃಂಭಣೆಯಿಂದ ನೆರವೇರಿಸಿದರು.

## ಷಷ್ಟ್ಯಬ್ದಿ ಆಚರಣೆ

ದಿನಾಂಕ 07.05.2023 ರಂದು ಪಡುಬಿದ್ರಿ ಉದಯಾದ್ರಿ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದಲ್ಲಿ ಬ್ರಹ್ಮಶ್ರೀ ವಾಗೀಶ ಎಸ್.ಶಾಸ್ತ್ರಿಯವರು ತನ್ನ ಷಷ್ಟ್ಯಬ್ದಿ ಪ್ರಯುಕ್ತ ಉಗ್ರರಥ ಶಾಂತಿಯನ್ನು ಪತ್ನಿ ಉಮಾ ಶಾಸ್ತ್ರೀ ಹಾಗೂ ಮಕ್ಕಳಾದ ಶ್ರೀವತ್ಸ ಶಾಸ್ತ್ರೀ ಮತ್ತು ಗೌರಿ ಶಾಸ್ತ್ರೀಯೊಂದಿಗೆ ಆಚರಿಸಿಕೊಂಡರು.

## ಶ್ರೀ ಶಾಂಕರ ತತ್ವಪ್ರಸಾರ ಅಭಿಯಾನಮ್,

ಶ್ರೀ ಶೃಂಗೇರಿ ಶಂಕರ ಮಠ ಕೋಟೆಕಾರು ಮತ್ತು ಶ್ರೀ ಶಂಕರ ಸೇವಾ ಪ್ರತಿಷ್ಠಾನ (ರಿ.) ಮಂಗಳೂರು

### ಶ್ರೀ ಶಂಕರ ಸೇವಾ ಪ್ರತಿಷ್ಠಾನ, ಬಂಟ್ವಾಳ ಘಟಕ

ಶ್ರೀ ಶಂಕರ ಭಗವತ್ಪಾದರು, ವೈಶ್ವಿಕ ತತ್ವ ಜ್ಞಾನಿಗಳು. ಅವರ ಜಯಂತಿಯನ್ನು ಕೇಂದ್ರ ಸರಕಾರದವರು ತತ್ವಜ್ಞಾನಿಗಳ ದಿನವೆಂದು ಘೋಷಿಸಿರುತ್ತಾರೆ ಹಾಗೂ ಶ್ರೀ ಶಂಕರ ಜಯಂತಿಯನ್ನು ತತ್ವಜ್ಞಾನಿಗಳ ದಿನವಾಗಿ ಆಚರಿಸಲಾಗುತ್ತಿದೆ. ವೈಶಾಖ ಶುದ್ಧ ಪಂಚಮಿಯಂದು ಶ್ರೀ ಶಂಕರ ಜಯಂತಿ. ವೈಶಾಖ ಶುದ್ಧ ಪ್ರತಿಪತ್ತಿನಿಂದ ಒಂದು ತಿಂಗಳ ಕಾಲ ಶ್ರೀ ಶಂಕರ ಜಯಂತಿ ಕಾರ್ಯಕ್ರಮಗಳನ್ನು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಕೇಂದ್ರಗಳಲ್ಲಿ ಹಮ್ಮಿಕೊಳ್ಳಲಾಗಿದೆ.

ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ಜಿಲ್ಲೆಗಳಲ್ಲಿ ಪರಂಪರೆಯಿಂದ ಶ್ರೀ ಶೃಂಗೇರಿ ಮಠದ ಹಲವಾರು ಶಿಷ್ಯ ಸಮಾಜಗಳಿವೆ. ವಿವಿಧ ಶಿಷ್ಯ ಸಮಾಜಗಳು. ಏಕತ್ರ ಸಮಾವೇಶಗೊಳ್ಳುವ ಅಪೂರ್ವ ಸಂದರ್ಭವಿದು. ಶಂಕರ ಪರಂಪರೆಯ ದಿವ್ಯವಾಗಿರುವ ಭವ್ಯವಾಗಿರುವ ಅಸ್ತಿತ್ವದ ದ್ಯೋತಕವಿದು. ಆದುದರಿಂದ ಅದ್ವೈತ ಪರಂಪರೆಯ ಅನುಯಾಯಿಗಳು, ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾ ಪೀಠದ ಶಿಷ್ಯವರ್ಗದವರಾದ ನಾವು ಒಂದಾಗಿ ಶ್ರೀ ಶಂಕರ ಜಯಂತಿ ಕಾರ್ಯಕ್ರಮವನ್ನು ಆಚರಿಸಬೇಕಾದುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿರುತ್ತದೆ. ಅಂತೆಯೇ ಈ ವರ್ಷ ಅವಿಭಜಿತ ಕನ್ನಡ ಜಿಲ್ಲೆಯ ವಿವಿಧ ಕೇಂದ್ರಗಳಲ್ಲಿ ಶ್ರೀ ಶಂಕರ ಜಯಂತಿ ಉತ್ಸವಗಳನ್ನು ಆಚರಿಸಿ

ಶ್ರೀ ಶಂಕರ ಜಯಂತಿ ಉತ್ಸವ-2023ರ ಸಮಾರೋಪ ಸಮಾರಂಭವನ್ನು ಬಂಟ್ವಾಳದ ಪಾಣೆಮಂಗಳೂರಿನಲ್ಲಿರುವ ಶ್ರೀ ಭಯಂಕೇಶ್ವರ ದೇವಸ್ಥಾನದ ಸಭಾಂಗಣದಲ್ಲಿ **ದಿನಾಂಕ 21.05.2023ನೇ ಭಾನುವಾರ,** ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಮಹಾಸನ್ನಿಧಾನಂಗಳವರ ಹಾಗೂ ತತ್ಕರಕಮಲಸಂಜಾತರಾದ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ ಪರಮಾನುಗ್ರಹದಿಂದ ಕಾರ್ಯಸೂಚಿಯಲ್ಲಿ ನಮೂದಿಸಿದಂತೆ ಜರಗಲಿರುವ ಈ ಕಾರ್ಯಕ್ರಮಕ್ಕೆ ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದ ಪೀಠದ ಶಿಷ್ಯವರ್ಗದವರೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಿ, ಶ್ರೀ ಶಂಕರ ಭಗವತ್ಪಾದರ ಹಾಗೂ ಶ್ರೀ ಶ್ರೀ ಉಭಯ ಜಗದ್ಗುರುಗಳವರ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

| | |
|---|---|
| ಗುರು ಸೇವಾಧುರೀಣ<br>ಪದ್ಮಶ್ರೀ ಪುರಸ್ಕೃತ<br>ಡಾ। ವಿ.ಆರ್. ಗೌರಿಶಂಕರ<br>ಸಿ.ಇ.ಒ. ಮತ್ತು ಆಡಳಿತಾಧಿಕಾರಿಗಳು,<br>ಶ್ರೀ ಶಾರದಾ ಪೀಠ, ಶೃಂಗೇರಿ | ಬೋಳ್ಯಾವ ಸತ್ಯ ಶಂಕರ<br>ಧರ್ಮಾಧಿಕಾರಿಗಳು,<br>ಶ್ರೀ ಶೃಂಗೇರಿ ಶಂಕರ ಮಠ<br>ಅಧ್ಯಕ್ಷರು,<br>ಶ್ರೀ ಶಂಕರ ಸೇವಾ ಪ್ರತಿಷ್ಠಾನ |

ಶ್ರೀ ಶಂಕರ ಸೇವಾ ಪ್ರತಿಷ್ಠಾನದ ವಿಶ್ವಸ್ಥ ಮಂಡಳಿ ಸದಸ್ಯರು
ಹಾಗೂ ಶ್ರೀ ಶಂಕರ ಸೇವಾ ಪ್ರತಿಷ್ಠಾನ ಬಂಟ್ವಾಳ ಘಟಕದ ಪದಾಧಿಕಾರಿಗಳು

## ನಾಮಕರಣ

ಶ್ರೀಮತಿ ಶ್ರೀಲತಾ ರಾವ್ ಮತ್ತು ಶ್ರೀ ಕೆ. ಪ್ರಕಾಶ ರಾವ್ ಇವರ ಪುತ್ರಿ ಶ್ರೀಮತಿ ದಿಶಾ ರಾವ್ ಹಾಗೂ ಶ್ರೀಮತಿ ಕವಿತಾ ಮತ್ತು ಶ್ರೀ ಬೊಕ್ಕಸ ಚಂದ್ರಶೇಖರ ರಾವ್ ಇವರ ಪುತ್ರ ಶ್ರೀ ಬೊಕ್ಕಸ ಚೇತನ ರಾವ್ ಇವರು ತಮ್ಮ ಮಗಳು **"ಆಲೋಡಿ"** ಯ ನಾಮಕರಣ ಸಮಾರಂಭವನ್ನು ಅಂಬಲಪಾಡಿಯ ಕಾಳಿಕಾಂಬ ನಗರದಲ್ಲಿರುವ ಮನೆ ಶಾಂತಾಲಯದಲ್ಲಿ ದಿನಾಂಕ 07.05.2023 ರಂದು ನೆರವೇರಿಸಿದರು.

## ಶುಭ ವಿವಾಹ


ಶ್ರೀ ಶಿವಪ್ರಸಾದ್ ನಾರಾಯಣರಾವ್ ವೈ.ವಿ ಮತ್ತು ಶ್ರೀಮತಿ ಮಾಲತಿ ಪ್ರಸಾದ್ ಅವರ ಪುತ್ರಿ **ಚಿ। ಸೌ। ಸ್ವಾತಿ** ಹಾಗೂ ಶ್ರೀ ವೆಂಕಟೇಶ್ ಜಿ ಮತ್ತು ಶ್ರೀಮತಿ ಮಮತಾ ಅವರ ಪುತ್ರ **ಚಿ। ಪ್ರಜ್ವಲ್** ಅವರ ವಿವಾಹವು ತಾ. 07.05.2023 ರಂದು ಶ್ರೀ ಶಿವಬಾಲಯೋಗಿ ಸಭಾ ಭವನ, ಜೆ.ಪಿ.ನಗರ ಬೆಂಗಳೂರಿನಲ್ಲಿ ಜರಗಿತು.

**** ****

ಶ್ರೀ ಪ್ರಶಾಂತ್ ಮತ್ತು ಶ್ರೀಮತಿ ಮೀರಾ ಮುಂಡ್ಕೂರು ಅವರ ಪುತ್ರಿ **ಚಿ। ಸೌ। ಡಾ. ರಮಿತಾ ಮುಂಡ್ಕೂರು** ಹಾಗೂ ದಿ. ಶ್ರೀಮತಿ ಸರೋಜಾ ಮತ್ತು ಶ್ರೀ ದತ್ತಗುರು ಗಣಪತಿ ಶಾನಭಾಗ್ ಅವರ ಪುತ್ರ **ಚಿ। ಗಣೇಶ್ ಶಾನಭಾಗ್** ಅವರ ವಿವಾಹವು ತಾ.30.04.2023 ರಂದು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಸದನದಲ್ಲಿ ಜರಗಿತು.


**ದೇವಿಕೃಪಾ ಏಜೆನ್ಸೀಸ್, ನಂದಿಕೂರು**

ಫೋನ್ : 2556536 (R), 2555466 (O), Mobile : 9845149521



ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.

ಪ್ರೊ.: ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

ಶುಭಾಶಯಗಳೊಂದಿಗೆ

**ಹೆಬ್ಬಾರ್ ಎಂಟರ್‌ಪ್ರೈಸಸ್**

ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.

ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.

ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

## ಎಸ್‌ಎಸ್‌ಎಲ್‌ಸಿ ಸಾಧಕರು



### ಕೆ. ಎನ್. ಅಂಬಿಕಾ

ದಿ. ಶ್ರೀ ನಾಗಭೂಷಣ ಶಾಸ್ತ್ರಿ ಮತ್ತು ಶ್ರೀಮತಿ ಅನ್ನಪೂರ್ಣ ಮುಂಡ್ಕೂರು ದಂಪತಿಯ ಪುತ್ರಿ ಕುಮಾರಿ ಕೆ.ಎನ್. ಅಂಬಿಕಾ ಅವರು ಎಸ್.ಎಸ್.ಎಲ್.ಸಿ. ಯಲ್ಲಿ 99% ಪಡೆದು ಟಾಪರ್ ಆಗಿದ್ದಾರೆ.



### ಭವಿತಾ

ಡಾ.ಸುಧೀರ್ ಟಿ ಮತ್ತು ಭಾವನಾ ಸುಧೀರ್ ದಂಪತಿಯ ಪುತ್ರಿ ಹಾಗೂ ಪುತ್ತೂರು ಟಿ.ಎಲ್.ರಾವ್ ಮತ್ತು ಅಲೆವೂರು ಪ್ರಭಾಕರ ರಾವ್ ಅವರ ಮೊಮ್ಮಗಳು ಕುಮಾರಿ ಭವಿತಾ ಎಸ್.ಎಸ್.ಎಲ್.ಸಿ. ಯಲ್ಲಿ 97.44% (609) ಗಳಿಸಿದ್ದಾರೆ.



### ಅನನ್ಯ

ಶ್ರೀ ಪಿ. ಪ್ರಭಾಕರ ಭಂಡಿ ಮತ್ತು ಶ್ರೀಮತಿ ಪ್ರತಿಭಾ ಭಂಡಿ ದಂಪತಿಯ ಪುತ್ರಿ ಕುಮಾರಿ ಅನನ್ಯ (ಸರ್ಕಾರಿ ಪ್ರೌಢಶಾಲೆ ಒಳಕಾಡು) ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 593 (95%) ಅಂಕ ಪಡೆದಿರುತ್ತಾಳೆ. ಶಾರದಾ ಬಳಗದ ಅಭಿನಂದನೆಗಳು.



### ಕಾರ್ತಿಕೇಯ ಎಲ್ಲೂರು

ಶ್ರೀ ಎಲ್ಲೂರು ಸೀತಾರಾಮ ರಾವ್ ಮತ್ತು ಶ್ರೀಮತಿ ಪುಷ್ಪಾ ದಂಪತಿಯ ಪುತ್ರ ಕಾರ್ತಿಕೇಯ ಎಲ್ಲೂರು ಅವರು ಎಸ್.ಎಸ್.ಎಲ್.ಸಿ. ಯಲ್ಲಿ 92.3% ಗಳಿಸಿದ್ದಾರೆ.

## ದ್ವಿತೀಯ ಪಿಯುಸಿ ಸಾಧಕರು



### ತನುಶ್ರೀ

ಶ್ರೀ ಅನಂತ ಉಬರಳೆ ಮತ್ತು ಶ್ರೀಮತಿ ಪ್ರತಿಮಾ ಎಲ್ಲೂರು ದಂಪತಿಯ ಪುತ್ರಿ ಕುಮಾರಿ ತನುಶ್ರೀ ದ್ವಿತೀಯ ಪಿಯುಸಿ ವಾಣಿಜ್ಯ ವಿಭಾಗದಲ್ಲಿ ರಾಜ್ಯಕ್ಕೆ 4ನೇ ರ‍್ಯಾಂಕ್ ಪಡೆದಿದ್ದಾರೆ (99%). ಮೂಡಬಿದ್ರಿ ಆಳ್ವಾಸ್ ಕಾಲೇಜು ವಿದ್ಯಾರ್ಥಿನಿ.



### ಮಾಧುರ್ಯ ಡಿ. ರಾವ್

ಶ್ರೀ ದಿನೇಶ್ ಪಿ. ಮತ್ತು ಶ್ರೀಮತಿ ಸುಮನಾ ದಂಪತಿಯ ಪುತ್ರಿ ಕುಮಾರಿ ಮಾಧುರ್ಯ ಡಿ. ರಾವ್ (ಪೂವಂದೂರು ಕುಟುಂಬ) ಇವರು ದ್ವಿತೀಯ ಪಿಯುಸಿಯಲ್ಲಿ 98% ಗಳಿಸಿದ್ದಾರೆ



### ಅನನ್ಯ ರಾವ್

ಬೈಕಾಡಿ ಶ್ರೀ ಡಾ. ಅನಿಲ್ ಕುಮಾರ್ ಮತ್ತು ಶ್ರೀಮತಿ ಡಾ. ಪ್ರಸನ್ನ ಎ.ರಾವ್ ದಂಪತಿಯ ಪುತ್ರಿ ಕುಮಾರಿ ಅನನ್ಯ ರಾವ್ ಇವರು ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ 97.33% ಫಲಿತಾಂಶ ಪಡೆದಿರುತ್ತಾರೆ.



### ಅಭಯ್ ಮಹೇಶ್ ವೈ

ಶ್ರೀ ಎಲ್ಲೂರು ಮಹೇಶ್ ರಾವ್ ಮತ್ತು ಶ್ರೀಮತಿ ನಂದನಾ ದಂಪತಿಯ ಪುತ್ರ ಅಭಯ್ ಮಹೇಶ್ ವೈ ಅವರು ಕರ್ನಾಟಕ ಬೋರ್ಡ್ ದ್ವಿತೀಯ ಪಿಯುಸಿಯಲ್ಲಿ 97.16% ಗಳಿಸಿದ್ದಾರೆ.



### ಶ್ವೇತಾ

ಸುಳ್ಯ ಶ್ರೀ ಐ.ಕೆ. ರಾಮಚಂದ್ರ ರಾವ್ ಮತ್ತು ಶ್ರೀಮತಿ ಅನುಸೂಯ ದಂಪತಿಯ ಪುತ್ರಿ ಶ್ವೇತಾ ದ್ವಿತೀಯ ಪಿಯುಸಿಯಲ್ಲಿ ಶೇಕಡಾ 97% (578) ಅಂಕಗಳಿಸಿರುತ್ತಾರೆ.



### ಖುಷಿ ಎಂ. ರಾವ್

ದಿ. ಶ್ರೀ ಸುಬ್ರಹ್ಮಣ್ಯ ಮತ್ತು ಶ್ರೀಮತಿ ಮಂಜುಳಾ ದಂಪತಿಯ ಪುತ್ರಿ ಕುಮಾರಿ ಖುಷಿ ಎಂ. ರಾವ್ ದ್ವಿತೀಯ ಪಿಯುಸಿ ವಾಣಿಜ್ಯ ವಿಭಾಗದಲ್ಲಿ 96.5% ಗಳಿಸಿದ್ದಾರೆ.



### ಅನಿರುದ್ಧ ವಿ. ರಾವ್

ಮಂಗಳೂರಿನ ಕದ್ರಿಯಲ್ಲಿರುವ ಶ್ರೀ ಯು.ಎಸ್.ವಿವೇಕ್ ರಾವ್ ಮತ್ತು ಶ್ರೀಮತಿ ಕಲಾನಿಧಿ ದಂಪತಿಯ ಪುತ್ರ ಅನಿರುದ್ಧ ವಿ. ರಾವ್ ಇವರು ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ 96% ಅಂಕ ಪಡೆದು ಉನ್ನತ ದರ್ಜೆಯಲ್ಲಿ ಉತ್ತೀರ್ಣರಾಗರುತ್ತಾರೆ.



### ಕೃತಿ ಎಸ್.ಎ.

ಶ್ರೀ ಶೈಲೇಂದ್ರ ಎ ಮತ್ತು ಶ್ರೀಮತಿ ಜ್ಯೋತಿ ದಂಪತಿಯ ಪುತ್ರಿ ಕೃತಿ ಎಸ್.ಎ. ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ 96% ಅಂಕಗಳಿಸಿದ್ದಾರೆ.



### ಅಖಿಲೇಶ್ ರಾವ್

ಪಡುಬಿದ್ರಿ ಶ್ರೀ ಸುನೀಲ್ ರಾವ್ ಮತ್ತು ಶ್ರೀಮತಿ ಪ್ರಶಾಂತಿ ರಾವ್ ದಂಪತಿಯ ಪುತ್ರ ಅಖಿಲೇಶ್ ರಾವ್ ಕರ್ನಾಟಕ ಬೋರ್ಡ್ ದ್ವಿತೀಯ ಪಿಯುಸಿ ವಾಣಿಜ್ಯ ವಿಭಾಗದಲ್ಲಿ 95.6% ಗಳಿಸಿದ್ದಾರೆ.



### ಶ್ರೀದತ್ತ ಹೆಬ್ಬಾರ್

ಕಬ್ಬಿನಾಲೆ ಶ್ರೀ ಕೆ. ಮಂಜುನಾಥ್ ಹೆಬ್ಬಾರ್ ಮತ್ತು ಶ್ರೀಮತಿ ಉಷಾ ದಂಪತಿಗಳ ಪುತ್ರ ಶ್ರೀದತ್ತ ಹೆಬ್ಬಾರ್ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 95.5% ಅಂಕಗಳಿಸಿದ್ದಾರೆ.



### ಪ್ರಜ್ಞಾ ರಾವ್

ಮಂದಾರ್ತಿ ಕಲ್ಲುದೇವಸ್ಥಾನದ ಶ್ರೀ ಕೆ. ಮಂಜುನಾಥ ರಾವ್ ಮತ್ತು ಶ್ರೀಮತಿ ಭಾನುಮತಿ ಎಂ.ರಾವ್ ದಂಪತಿಯ ಪುತ್ರಿ ಕುಮಾರಿ ಪ್ರಜ್ಞಾ ರಾವ್ ಇವರು ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ 95.20% ಫಲಿತಾಂಶ ಪಡೆದಿರುತ್ತಾರೆ.



### ಆದಿತ್ಯ ರಾವ್

ಶ್ರೀ ರಾಮಕೃಷ್ಣ ಕಟುಕುಕ್ಕೆ ಮತ್ತು ಶ್ರೀಮತಿ ಉಮಾ ರಾವ್ ದಂಪತಿಯ ಪುತ್ರ ಆದಿತ್ಯ ರಾವ್ ಕರ್ನಾಟಕ ಬೋರ್ಡ್ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ 95.1% ಅಂಕಗಳಿಸಿದ್ದಾರೆ.



### ಅಪೇಕ್ಷಾ ಎಚ್.

ಹೈದಂಗೂರು ಶ್ರೀಧರ ರಾವ್ ಮತ್ತು ಶ್ರೀಮತಿ ರಾಜೇಶ್ವರಿ ದಂಪತಿಯ ಪುತ್ರಿ ಅಪೇಕ್ಷಾ ಎಚ್. ಅವರು ಕರ್ನಾಟಕ ಬೋರ್ಡ್ ಪಿಯುಸಿ ಪರೀಕ್ಷೆಯಲ್ಲಿ ಶೇಕಡಾ 95% (570) ಅಂಕಗಳಿಸಿರುತ್ತಾರೆ.



### ವಿಘ್ನೇಶ್ ಕುಮಾರ್

ಚೊಕ್ಕಾಡಿ ಶ್ರೀ ದಿವಾಕರ್ ರಾವ್ ಮತ್ತು ಶ್ರೀಮತಿ ವಿಜಯಲಕ್ಷ್ಮಿ ದಂಪತಿಯ ಪುತ್ರ ವಿಘ್ನೇಶ್ ಕುಮಾರ್ ಕರ್ನಾಟಕ ಬೋರ್ಡ್ ದ್ವಿತೀಯ ಪಿಯುಸಿ ಯಲ್ಲಿ 95% ಗಳಿಸಿದ್ದಾರೆ.



### ಪ್ರಣಮ್ಯ

ಬೆಂಗಳೂರಿನ ಚಿಕ್ಕಬಾಣಾವರದ ಶ್ರೀ ಮೋಹನ್‌ದಾಸ್ ವೈ ಮತ್ತು ಶ್ರೀಮತಿ ಪೂರ್ಣಿಮಾ ದಂಪತಿಯ ಪುತ್ರಿ ಕುಮಾರಿ ಪ್ರಣಮ್ಯ ಅವರು ದ್ವಿತೀಯ ಪಿಯುಸಿ ವಿಜ್ಞಾನದಲ್ಲಿ 95% ಗಳಿಸಿದ್ದಾರೆ.



### ಅಶ್ವಿನ್ ಎಸ್. ರಾವ್

ಶ್ರೀ ಶ್ರೀನಿವಾಸ್ ರಾವ್ ಮತ್ತು ಶ್ರೀಮತಿ ವೈಶಾಲಿ ದಂಪತಿಯ ಪುತ್ರ ಅಶ್ವಿನ್ ಎಸ್. ರಾವ್ ಕುಂಜಿಬೆಟ್ಟು ಉಡುಪಿಯ ವಿದ್ಯೋದಯ ಪಿಯು ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ವಿಜ್ಞಾನದಲ್ಲಿ 95% ಗಳಿಸಿದ್ದಾರೆ.



### ಅನುಜ್ಞಾ ಸಿ.ಆರ್.

ಶ್ರೀ ರಾಜಗೋಪಾಲ್ ರಾವ್ (ಚೀನಾಡಿ) ಕಲ್ಲುಗುಂಡಿ ಮತ್ತು ಶ್ರೀಮತಿ ಆಶಾಲತಾ ದಂಪತಿಯ ಪುತ್ರಿ ಕುಮಾರಿ ಅನುಜ್ಞಾ ಸಿ.ಆರ್. ದ್ವಿತೀಯ ಪಿಯುಸಿ ವಿಜ್ಞಾನದಲ್ಲಿ 94.33% ಅಂಕಗಳಿಸಿದ್ದಾರೆ.



### ಕಶ್ಯಪ್

ಶ್ರೀ ಕಿಶೋರ್ ಕುಮಾರ್ ಮತ್ತು ಶ್ರೀಮತಿ ರೂಪಶ್ರೀ ದಂಪತಿಯ ಪುತ್ರ ಕಶ್ಯಪ್ ದ್ವಿತೀಯ ಪಿಯುಸಿ (PCMB) ಪರೀಕ್ಷೆಗಳಲ್ಲಿ 562/600 (94%) ಗಳಿಸಿದ್ದಾರೆ. ಓದಿದ್ದು ಪುತ್ತೂರಿನ ವಿವೇಕಾನಂದ ಪಿಯು ಕಾಲೇಜಿನಲ್ಲಿ.



### ಸಮೃದ್ಧಿ ರಾವ್

ಶ್ರೀ ಬಾಲಚಂದ್ರ ರಾವ್ ಮತ್ತು ಶ್ರೀಮತಿ ಶಾಂತಿ ರಾವ್ ದಂಪತಿಯ ಪುತ್ರಿ ಕುಮಾರಿ ಸಮೃದ್ಧಿ ರಾವ್ ದ್ವಿತೀಯ ಪಿಯುಸಿ ವಾಣಿಜ್ಯ ವಿಭಾಗದಲ್ಲಿ 94% ತೇರ್ಗಡೆಯಾಗಿದ್ದಾರೆ. ಇವರು ಉಡುಪಿ ವಿದ್ಯೋದಯ ಪಿಯು ಕಾಲೇಜಿನ ವಿದ್ಯಾರ್ಥಿನಿ.



### ಸಹನಾ

ಶ್ರೀ ಹರಿಕಿರಣ್ ಕೊಯಿಲ ಮತ್ತು ಶ್ರೀಮತಿ ಅನುರಾಧ ಹಿರೇಬಂಡಾಡಿ ದಂಪತಿಯ ಪುತ್ರಿ ಕುಮಾರಿ ಸಹನಾ ದ್ವಿತೀಯ ಪಿಯುಸಿ (PCMB) 94% ಗಳಿಸಿದ್ದಾರೆ. ಓದಿದ್ದು ವಿವೇಕಾನಂದ ಪಿಯು ಕಾಲೇಜು ಪುತ್ತೂರು.



### ಭರತೇಶ ಪಿ.ಬಿ.

ಸುಳ್ಯ ಕೇರ್ಪಳ ವಕೀಲ ಶ್ರೀ ಭಾಸ್ಕರ್ ರಾವ್ ಮತ್ತು ಶ್ರೀಮತಿ ಕಲ್ಪಲತಾ ದಂಪತಿಯ ಪುತ್ರ ಭರತೇಶ ಪಿ.ಬಿ. ಅವರು ಕರ್ನಾಟಕ ಬೋರ್ಡ್ ಪಿಯುಸಿ ವಿಜ್ಞಾನ ವಿಭಾಗ ಪರೀಕ್ಷೆಯಲ್ಲಿ ಶೇಕಡಾ 94% (562) ಅಂಕಗಳಿಸಿರುತ್ತಾರೆ.



### ನಮನ ಬಿ.ಕೆ.

ಬಾರ್ಕೂರು ಶ್ರೀ ಕುಮಾರಸ್ವಾಮಿ ಬಿ.ಆರ್. ಮತ್ತು ಶ್ರೀಮತಿ ಸವಿತಾ ಏರ್ಮಾಳು ದಂಪತಿಯ ಪುತ್ರಿ ಕುಮಾರಿ ನಮನ ಬಿ.ಕೆ. ಇವರು ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ 93% ಫಲಿತಾಂಶ ಪಡೆದಿರುತ್ತಾರೆ.



### ರಚನಾ ರಾವ್ ಕೆ.

ಶ್ರೀ ರವೀಂದ್ರರಾವ್ ಕೆ. ಮತ್ತು ಶ್ರೀಮತಿ ಲಕ್ಷ್ಮೀ ದಂಪತಿಯ ಪುತ್ರಿ ರಚನಾ ರಾವ್ ಕೆ. ದ್ವಿತೀಯ ಪಿಯುಸಿ ವಾಣಿಜ್ಯ ವಿಭಾಗದಲ್ಲಿ 92.7% ಅಂಕಗಳಿಸಿದ್ದಾರೆ.



### ಕೆ.ಎಸ್. ಸುಜೇಶ್

ನಿಟ್ಟೆ ಶ್ರೀ ಕೆ. ಸತ್ಯನಾರಾಯಣ ಹೆಬ್ಬಾರ್ ಮತ್ತು ಶ್ರೀಮತಿ ಪದ್ಮಜ ದಂಪತಿಯ ಪುತ್ರ ಕೆ.ಎಸ್. ಸುಜೇಶ್ ದ್ವಿತೀಯ ಪಿಯುಸಿ (PCMB) ವಿಜ್ಞಾನ ವಿಭಾಗದಲ್ಲಿ 92% ಅಂಕಗಳಿಸಿದ್ದಾರೆ.

## ನವೀಕೃತ ಶ್ರೀ ಶಾರದಾ ಮಂಟಪದ ಅನುಕೂಲತೆಗಳ ಲಭ್ಯತೆ




ಇದ್ದ ಕಟ್ಟಡವನ್ನೇ ಆಧುನಿಕತೆಗೆ ತಕ್ಕಂತೆ ನವೀಕರಣಗೊಳಿಸಿದ್ದು, ಇಕ್ಕೆಲಗಳಲ್ಲಿ ಮೆಟ್ಟಲು ಹೊಂದಿ ಮೇಲಿನ ಬಾಲ್ಕನಿ ಸೌಲಭ್ಯವು ಹೆಚ್ಚು ಸದುಪಯೋಗವಾಗಲಿದೆ. ಸುಮಾರು 600 ಆಸನ ಸಾಮರ್ಥ್ಯದ ಸಭಾಭವನವಾಗಿದ್ದು, ಸಂಪೂರ್ಣ ಹವಾನಿಯಂತ್ರಿತವಾಗಲಿದೆ. ಸುತ್ತಲಿನ ಕಿಟಕಿ ಬಾಗಿಲುಗಳು ಪಾರದರ್ಶಕ ಗಾಜಿನಿಂದ ಆವೃತವಾಗಿದ್ದು, ಮೊದಲಿಗಿಂತಲೂ ಹೆಚ್ಚು ಬೆಳಕು ಸಭಾಭವನದೊಳಗೆ ಲಭ್ಯವಾಗುವುದರಲ್ಲಿ ಸಂಶಯವಿಲ್ಲ. ನಗರದಲ್ಲಿರುವ ಉಳಿದೆಲ್ಲಾ ಸಭಾಭವನಗಳೊಂದಿಗೆ ಹೋಲಿಕೆ ಮಾಡಿದಾಗ ನಮ್ಮ ಈ ಶಾರದಾ ಮಂಟಪದ ಹವಾನಿಯಂತ್ರಿತ ಸಭಾಭವನದ ಬಾಡಿಗೆಯು ಬಹಳಷ್ಟು ಕಡಿಮೆಯಾಗಿದ್ದು, ಸಾಮಾನ್ಯ ವರ್ಗದವರೂ ತಮ್ಮ ಮದುವೆ, ಉಪನಯನ, ಮೊದಲಾದ ಸಮಾರಂಭಗಳನ್ನು ಏರ್ಪಡಿಸಬಹುದಾಗಿದೆ. ಸದ್ಯಕ್ಕೆ ಹವಾನಿಯಂತ್ರಿತ ವ್ಯವಸ್ಥೆ ಇಲ್ಲದೆಯೂ ಸಭಾಭವನವನ್ನು ಉಪಯೋಗಿಸುವ ಆಯ್ಕೆಯನ್ನೂ ಹಾಗೆಯೇ ಇರಿಸಲಾಗಿದೆ. ಒಟ್ಟಿನಲ್ಲಿ ಆಧುನಿಕ ಸೌಲಭ್ಯಗಳ ಹವಾನಿಯಂತ್ರಿತ ಸಭಾಭವನ, ಸುಸಜ್ಜಿತ ಭೋಜನಶಾಲೆ, ವಿಶಾಲ ಅಡುಗೆ ಶಾಲೆ, ಸಾಕಷ್ಟು ಸಂಖ್ಯೆಯ ಸುಸಜ್ಜಿತ ಶೌಚಾಲಯ ಮತ್ತು ಸ್ನಾನದ ಕೋಣೆ, ನೂತನ ಸೌಲಭ್ಯಗಳಿರುವ ವಧೂ-ವರರ ಕೊಠಡಿಗಳು, ವಿಶಾಲ ವೇದಿಕೆಗಳಿಂದ ಕಂಗೊಳಿಸುವ ಶ್ರೀ ಶಾರದಾ ಮಂಟಪವು ಎಲ್ಲ ವರ್ಗದ ಜನರ ಗಮನ ಸೆಳೆಯುವುದರಲ್ಲಿ ಸಂಶಯವಿಲ್ಲ.

## ಉಡುಪಿಯ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಶ್ರೀ ಶಂಕರ ಜಯಂತಿ



ತಾ.25.04.2023ರ ವೈಶಾಖ ಮಾಸದ ಶುದ್ಧ ಪಂಚಮಿಯ ದಿನದಂದು ಉಡುಪಿಯ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಶ್ರೀ ಶಂಕರ ಜಯಂತಿ ಆಚರಣೆಯನ್ನು ನಡೆಸಲಾಯಿತು. ಉಡುಪಿಯ ಖ್ಯಾತ ವೈದ್ಯ ಹಾಗೂ ಲೇಖಕ ಡಾ.ವೈ. ಸುದರ್ಶನ್ ರಾವ್ ಇವರು ಪ್ರವಚನಕಾರರಾಗಿ ಆಗಮಿಸಿದ್ದರು. ಶ್ರೀ ಶಂಕರರು ತನ್ನ ಅದ್ವೈತ ಸಿದ್ಧಾಂತದ ಪ್ರಕಾರ ಎರಡು ಜೀವಗಳ ದೇಹಗಳ ನಡುವೆ ಕಾಣುವ ಭೇದವು ಕೇವಲ ತೋರಿಕೆ ಮಾತ್ರ ಆಗಿದ್ದು ಅವರೊಳಗಿರುವ ಆತ್ಮವು ಈ ಬ್ರಹ್ಮಾಂಡದಿಂದ ಬಂದಿರುವುದಾಗಿದೆ. ಪ್ರತಿಯೊಂದು ಜೀವದೊಳಗಿರುವ ಆತ್ಮವು ಬ್ರಹ್ಮಾಂಡದ ಭಾಗವೇ ಆಗಿದೆ, ತೋರಿಕೆಗೆ ಕಾಣುವ ನಮ್ಮೊಳಗಿನ ಭೇದವು ಮಿಥ್ಯೆ ಆಗಿದೆ ಎಂದು ಪ್ರತಿಪಾದಿಸಿದ್ದರು ಎಂದು ಹೇಳಿದರು. ಈ ಸಿದ್ಧಾಂತವನ್ನು ಮುಂದಿಟ್ಟುಕೊಂಡು ಎಂಟನೆಯ ಶತಮಾನದ ಸಂದಿಗ್ಧ ಕಾಲದಲ್ಲಿ ಭಾರತವನ್ನು ಒಂದುಗೂಡಿಸಿದ್ದರು ಎಂದು ಹೇಳಿದರು. ಉಡುಪಿಯ ಅಪರ ಜಿಲ್ಲಾಧಿಕಾರಿಗಳಾದ ಶ್ರೀಮತಿ ವೀಣಾ ಹಾಗೂ ಜಿಲ್ಲಾ ಯೋಜನಾಧಿಕಾರಿಗಳಾದ ಶ್ರೀ ಶ್ರೀನಿವಾಸರಾವ್ ಇವರು ಉಪಸ್ಥಿತರಿದ್ದು ಶ್ರೀ ಶಂಕರಾಚಾರ್ಯರ ಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಉಡುಪಿ ತಾಲೂಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ರವಿರಾಜ್ ಹೆಚ್.ಪಿ. ಹಾಗೂ ಉಡುಪಿ ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಸುರೇಂದ್ರ ಅಡಿಗ, ಉಡುಪಿ ಜಿಲ್ಲೆ ಹಿರಿಯ ನಾಗರಿಕರ ಸಂಘದ ಗೌರವಾಧ್ಯಕ್ಷರಾದ ಶ್ರೀ ಸಿ.ಎಸ್.ರಾವ್, ಎಲ್ಲೂರು ಲಕ್ಷ್ಮೀನಾರಾಯಣ ಜ್ಯೋತಿಷ್ಕ ಚಾರಿಟೇಬಲ್ ಟ್ರಸ್ಟ್ ಇದರ ಟ್ರಸ್ಟಿಗಳಾದ ಶ್ರೀ ವೈ. ಭುವನೇಂದ್ರ ರಾವ್, ಉಡುಪಿ ಶ್ರೀ ಶಾರದಾ ಭಜನಾ ಮಂಡಳಿಯ ಸದಸ್ಯೆಯರಾದ ಡಾ. ವಿದ್ಯಾ ಎಸ್ ರಾವ್ ಹಾಗೂ ಇತರ ಸದಸ್ಯರು ಆಗಮಿಸಿದ್ದರು. ಡಾ। ವೈ.ಸುದರ್ಶನ್ ರಾವ್ ಇವರು ಇತ್ತೀಚೆಗೆ ಬರೆದು ಪ್ರಕಟಿಸಿದ್ದ ಶ್ರೀ ಶಂಕರ ಆಚಾರ್ಯರ ಜೀವನ ಚರಿತ್ರೆಯನ್ನು, ಎಂಟನೇ ಶತಮಾನದಲ್ಲಿ ಭಾರತದ ಸಾಂಸ್ಕೃತಿಕ ಸಮಗ್ರತೆಯನ್ನು ಅವರು ಒಂದುಗೂಡಿಸಿದ ದೃಷ್ಟಿಯಲ್ಲಿ ಬಿಂಬಿಸುವ ಪುಸ್ತಕ "ಸಂಭವಾಮಿ ಯುಗೇ ಯುಗೇ" ಗೌರವ ಪ್ರತಿಗಳನ್ನು ವಿತರಿಸಲಾಯಿತು.

## ನಾರ್ತ್ ಅಮೆರಿಕಾದಲ್ಲಿ ಶ್ರೀ ಶಂಕರ ಜಯಂತಿ ಆಚರಣೆ




ನಾರ್ತ್ ಅಮೆರಿಕಾದ ಸ್ಥಾನಿಕ ಸಮಾಜದವರು (Sthanika Samaja of North America) ತಮ್ಮ ಸಂಸ್ಥೆಯಲ್ಲಿ ಶ್ರೀ ಶಂಕರಾಚಾರ್ಯರ ಹುಟ್ಟುಹಬ್ಬದ ಆಚರಣೆಯನ್ನು ಸಂಭ್ರಮದಿಂದ ಆನ್ಲೈನ್‌ನಲ್ಲಿ ತಾ.25.04.2023ರಂದು ಆಚರಿಸಿದರು. ವಿಘ್ನವಿನಾಶಕ ಗಣಪತಿ ಪ್ರಾರ್ಥನೆಯೊಂದಿಗೆ ಪ್ರಾರಂಭಗೊಂಡ ಈ ಕಾರ್ಯಕ್ರಮವು ಶ್ರೀ ಶಂಕರಾಚಾರ್ಯರ ಪೂಜೆ ಹಾಗೂ ಸಮಾಜ ಬಂಧುಗಳ ಕಲಾಪ್ರದರ್ಶನಗಳೊಂದಿಗೆ ಭರ್ಜರಿಯಾಗಿ ನಡೆಯಿತು. ಡಾ. ನಾಗಭೂಷಣ್ ಮುಲ್ಕಿ ಹಾಗೂ ಡಾ. ಉಷಾ ಕೋಲ್ಲೆ ಶ್ರೀ ಶಂಕರ ಪೂಜೆಯನ್ನು ಮತ್ತು ಅಷ್ಟೋತ್ತರವನ್ನು ಮಾಡಿ ಉತ್ತರ ಅಮೇರಿಕಾ ಸ್ಥಾನಿಕ ಸಮಾಜದ ಉದ್ದೇಶ ಮತ್ತು ಮುಂಬರುವ ಕಾರ್ಯಕ್ರಮಗಳ ಬಗ್ಗೆ ವಿವರಿಸಿದರು. ದಿನೇಶ್ ರಾವ್ ಶಂಕರರ ಜೀವನ ಚರಿತ್ರೆ, ಅವರ ಸಾಧನೆ ಮತ್ತು ಗುರು ಪರಂಪರೆಯ ಮಹತ್ವದ ಬಗ್ಗೆ ಹೇಳಿದರು. ಮಾರ್ಪಳ್ಳಿ ಹರೀಶ್ ರಾವ್ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಿರ್ವಹಿಸಿದರು. ಕಿಶೋರ್ ರಾವ್ ಅವರ ಧನ್ಯವಾದ ಸಮರ್ಪಣೆಯೊಂದಿಗೆ ಕಾರ್ಯಕ್ರಮವು ಸಮಾಪನಗೊಂಡಿತು.

**ಕಾರ್ಯಕ್ರಮಗಳ ವಿವರ :**

ಗಣೇಶ ಪಂಚರತ್ನ-ರಜಿನಿ, ಧ್ರಿತಿ; ಭರತನಾಟ್ಯ-ನಿಧಿ; ಭಜಗೋವಿಂದಂ-ಲೋಚನ್, ಲೋಹಿತ್; ಭಗವದ್ಗೀತಾ ಅಧ್ಯಾಯ 12-ಸಂವಿತ್ ಶಾನಭಾಗ್; ಗುರುವಂದನಂ-ರಿತ್ವಿ ರಾವ್; ಭಜನೆ-ರಿತಿಕಾ ರಾವ್; ಭಕ್ತಿ ಜಿಹೀತೆ-ಧ್ರಿತಿ ರಾವ್; ಶಿವಪಂಚಾಕ್ಷರ-ಸಾಕೇತ್; ಅಚ್ಯುತಾಷ್ಟಕಂ ನೃತ್ಯ-ರಿತಿಕಾ ರಾವ್, ಸಾಕೇತ್ ಗೌನದಲ್ಕರ್, ಅನ್ವಿಕ ಪ್ರಸಾದ್, ಆರವ್ ಪ್ರಸಾದ್; ಲಿಂಗಾಷ್ಟಕಮ್ ಪಿಯಾನೋ ರಿಸೈಟಲ್-ತರುಣ್ ರಾವ್; ಶರಣೆಂಬೆ ಶಶಿಭೂಷಣ-ಗಾಯತ್ರಿ ರಾವ್; ಜಯ ಜಯ ಮಹಾದೇವ-ರಾಘವೇಂದ್ರ ರಾವ್; ಭೋ ಶಂಭೋ ವೀಣಾ-ವಾಣಿ ರಾವ್; ಕಮಲದ ಮಗದೊಳೆ ವೀಣಾ-ದಿಶಾ ರಾವ್; ಶಾರದೆ ಕರುಣಾನಿದೆ-ಬಬಿತಾ, ಅಮೂಲ್ಯ; ಶಂಕರ ಗುರುವಾರ-ವಾಣಿ ಹರೀಶ್ ರಾವ್; ಶಿವಾಷ್ಟಕಂ-ಸುಮನಾ ನಟೋಗಿ, ಅನಿಲ್ ನಟೋಗಿ, ವನೀಷಾ ನಟೋಗಿ, ರೋಹನ್ ನಟೋಗಿ; ಮಂಗಳಂ ಗುರುಶ್ರೀ-ಸುಮನಾ ನಟೋಗಿ, ಅಪೂರ್ವ ರಾವ್, ವಾಣಿ ಹರೀಶ್ ರಾವ್.

ಇದು ನಾರ್ತ್ ಅಮೆರಿಕಾದ ಸ್ಥಾನಿಕ ಸಮಾಜದ ಮೊದಲ ಆನ್ಲೈನ್ ಮಿಲನ ಮತ್ತು ಕಾರ್ಯಕ್ರಮ ಆಗಿತ್ತು. ಹೀಗೆ ಮುಂದೆ ಇನ್ನೂ ಹೆಚ್ಚು ಕಾರ್ಯಕ್ರಮಗಳನ್ನು ಮಾಡಲು ಸಮಾಜಬಾಂಧವರ ಬೆಂಬಲ, ಸಹಕಾರ, ಉತ್ತೇಜನ, ಮಾರ್ಗದರ್ಶನ ಹಾಗೂ ಶೃಂಗೇರಿ ಗುರುಗಳ ಮತ್ತು ಶಾರದಾಂಬೆಯ ಅನುಗ್ರಹ ದೊರಕಲಿ ಎಂದು ಪ್ರಾರ್ಥಿಸುತ್ತೇವೆ.

With Best Compliments From :




SHREE SHARADA – Printed and Published by P. Prabhakara Bhandy on behalf of Shree Stanika Brahmana Sangha. Printed at Shrinidhi Graphic Tech, D.No. 8-7A1-12, Ground Floor, Shambhavi Crystal Biz Hub, Near D.C Office, Saralabettu Ward, Herga Village, Dist : UDUPI - 576104, Karnataka. Published at : Shri Stanika Brahmana Sangha, Shri Sharada Mantapa, Sharada Nagara, Kunjibettu, Udupi - 576 102. Editor : U. Aravinda Kumar